ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ]
ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 7
ಸಂಚಿಕೆ 42
ಅಕ್ಟೋಬರ್ 20, 1985
ಬೆಲೆ 60 ಪೈಸೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 12ನೇ ರಾಜ್ಯ ಸಮ್ಮೇಳನ

ಮುನ್ನಡೆ ಸಾಗಲು ಮುಂದಾಗೋಣ

"ದೇಶದಲ್ಲಿ ಒಟ್ಟು ವಸ್ತುಸ್ಥಿತಿ ಮತ್ತು ನಿರ್ದಿಷ್ಟವಾಗಿ ಕರ್ನಾಟಕದ ವಸ್ತುಸ್ಥಿತಿಯಲ್ಲಿ ದೊಡ್ಡ ಚಳುವಳಿಯ ಮುನ್ನಡೆಯನ್ನು ಸಾಧಿಸಲು ನಮಗೆ ಸಾಕಷ್ಟು ಅವಕಾಶಗಳಿವೆ. ಅಂಥ ಅವಕಾಶಗಳನ್ನು ಉಪಯೋಗ ಮಾಡಿಕೊಳ್ಳಲು ಸಾಮೂಹಿಕವಾಗಿ ಕಾರ್ಯ ವೆಸಗುವ ಸರ್ವಸಾಧಾರಣ ಪ್ರಜಾಪ್ರಭುತ್ವ ಚಳುವಳಿಯ ಮತ್ತು ಸಾಮೂಹಿಕ ಚಳುವಳಿಯ ರಾಜಕೀಯ -ಸಂಘಟನಾತ್ಮಕ ಸಮಸ್ಯೆಗಳನ್ನು ಬಗೆಹರಿಸುವಂಥಾ ಪಕ್ಷದ ಮುಖಂಡತ್ವ ಅಗತ್ಯ- ಪಕ್ಷದ ರಾಜ್ಯ ಸಮಿತಿ ಸಭೆಗಳಲ್ಲಿ ಚಳುವಳಿಗಳ ಮತ್ತು ಹೋರಾಟಗಳ ರೂಪರೇಶೆಗಳನ್ನು ರೂಪಿಸಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಂದುಗೂಡಿಸುವ ರಾಜಕೀಯ ಚಳುವಳಿಗಳನ್ನು ನಡೆಸುತ್ತಾ ಬರಬೇಕೆಂಬ" ಸಲಹೆಯನ್ನು ಕರ್ನಾಟಕ ರಾಜ್ಯ ಸಮಿತಿಗೆ ಪಕ್ಷದ ಕೇಂದ್ರ ಅಕ್ಟೋಬರ್ 1982 ರಲ್ಲಿ ಮಾಡಿತ್ತು.

"ಜಲಂಧರ್ ಮತ್ತು ಸಾಲ್ಕಿಯಾ ನಿರೂಪಣೆಯಂತೆ ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯನ್ನು ಸಾಧಿಸುವ ಮತ್ತು ಸಾಮೂಹಿಕ ಕ್ರಾಂತಿಕಾರಿ ಪಾರ್ಟಿಯನ್ನು ಕಟ್ಟುವ ಕಾರ್ಯ ಈ ರಾಜ್ಯದಲ್ಲಿ ಸಫಲವಾಗಬೇಕಾದರೆ ಬಂಡವಾಳಶಾಹಿ ಭೂ ಮಾಲಕ ವರ್ಗದ ರಾಜಕೀಯ ಪಾರ್ಟಿಗಳ ಮತ್ತು ಗುಂಪುಗಳ, ಕೆಲವು ಕ್ರಿಶ್ಚಿಯನ್ ಗುಂಪುಗಳ, ದಲಿತರ ಮತ್ತು ನಕ್ಸಲೈಟರ ಬಹಿರಂಗವಾದ ಸಿದ್ಧಾಂತಗಳನ್ನು ಬಯಲಿಗೆಳೆದರೆ ಮಾತ್ರ ಸಾಧ್ಯ.

"ಇತ್ತೀಚಿಗಿನ ಬೆಳವಣಿಗೆಗಳು ಈ ಸಿದ್ಧಾಂತಗಳ ವಿರುದ್ಧ ಯಶಸ್ವೀ ಹೋರಾಟಕ್ಕೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ದೃಢೀಕರಿಸುವ ಕೆಲಸಕ್ಕೆ ಮತ್ತು ಸಿಪಿಐ (ಎಂ) ನ್ನು ಸಾಮೂಹಿಕ ಕ್ರಾಂತಿಕಾರಿ ಪಾರ್ಟಿಯನ್ನಾಗಿ ಬೆಳೆಸಲಿಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿದೆ. ಹಲವಾರು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಐಕ್ಯತೆಯ ಕಾರ್ಯಾಚರಣೆಯಲ್ಲಿ ಒಂದು ಮಾಡಿಸುವಲ್ಲಿ ಕಾರ್ಮಿಕ ವರ್ಗ, ರೈತ ಮತ್ತು ಇತರ ದುಡಿಯುವ ವರ್ಗದ ಸಂಘಟಿತ ಸಂಯುಕ್ತ ಸಾಮೂಹಿಕ ಚಳುವಳಿ ಹಾಗೂ ಹೋರಾಟಗಳನ್ನು ನಡೆಸುವಲ್ಲಿ ಪಾರ್ಟಿಗೆ ಯಶಸ್ಸು ದೊರೆಯುತ್ತಿದೆ. ರಾಜ್ಯದ ರಾಜಕಾರಣದಲ್ಲಿ ಪ್ರಭಾವವನ್ನುಂಟು ಮಾಡಲು ಈಗಿರುವ ಅನುಕೂಲ ಪರಿಸ್ಥಿತಿ ಹಿಂದೆಂದೂ ಇರಲಿಲ್ಲ" ಎಂಬ ಅಭಿಪ್ರಾಯವನ್ನು ವಿಜಯವಾಡದಲ್ಲಿ ಸೇರಿದ್ದ ಪಕ್ಷದ ಹನ್ನೊಂದನೇ ಸಮ್ಮೇಳನದಲ್ಲಿ ಮಂಡಿಸಲಾದ ಕರ್ನಾಟಕದ ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದೆ.

1942 ರಿಂದಲೂ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳೆದು ಬರುತ್ತಿದ್ದಂತೆಯೇ, ಮುಂಬಯಿ–ಹೈದರಾಬಾದ್, ಮದ್ರಾಸ್ ಪ್ರದೇಶಗಳಲ್ಲೂ, ಮೈಸೂರು ಸಂಸ್ಥಾನದಲ್ಲೂ ಪ್ರಜಾಪ್ರಭುತ್ವ ಹಕ್ಕಿಗಾಗಿ, ರೈತ–ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ, ವಿದ್ಯಾರ್ಥಿಗಳ ಬೇಡಿಕೆಗಳಿಗಾಗಿ ಹಲವಾರು ತೀವ್ರ ಹೋರಾಟಗಳನ್ನು ನಡೆಸುತ್ತಲೇ ಬಂದಿತ್ತು. ಅಂದಿನ ಕನ್ನಡ ಮಾತಾಡುವ ಪ್ರದೇಶಗಳಲ್ಲೂ ಅನಂತರ 1956 ರಲ್ಲಿ ಏಕೀಕೃತ ಕರ್ನಾಟಕ ರಾಜ್ಯ ಸ್ಥಾಪನೆಯಾದ ನಂತರವೂ ಕಮ್ಯುನಿಸ್ಟ್ ಪಕ್ಷ ರಾಜ್ಯದ ರಾಜಕೀಯದಲ್ಲಿ ಹೇಳಿಕೊಳ್ಳುವಂತ ಪ್ರಭಾವ ಹೊಂದಿತ್ತು. ಆದರೆ ಅನಂತರದ ಕೆಲವು ವರ್ಷಗಳಲ್ಲಿ ಪಕ್ಷದ ಮುಖಂಡತ್ವದಲ್ಲಿ ನುಸುಳಿಕೊಂಡ ಎಡಪಂಥೀಯ ನಿಲುವಿನಿಂದಾಗಿ ನಮ್ಮ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಬೆಳವಣಿಗೆಗೆ ಅಡ್ಡಿ ಉಂಟಾಯಿತು. 1978ರಲ್ಲಿ ಅಂಥ ಪ್ರವೃತ್ತಿಯ ವಿರುದ್ಧ ಹೋರಾಡಿ, ಜಲಂಧರದಲ್ಲಿ ಸಮಾವೇಶಗೊಂಡಿದ್ದ ಪಕ್ಷದ ಹತ್ತನೇ ಸಮ್ಮೇಳನದಲ್ಲಿ ನಿರೂಪಿಸಿದ ನಿರೂಪಣೆಗನುಸಾರವಾಗಿ, ಸರ್ವಾಧಿಕಾರ ಶಕ್ತಿಯ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಸಂಘಟಿಸಿ ಜನಸಾಮಾನ್ಯರ ಹಕ್ಕು ಬಾಧ್ಯತೆಯ ರಕ್ಷಣೆಗಾಗಿ ಚಳುವಳಿ ಮುಂದುವರಿಸಿ ನಮ್ಮ ರಾಜ್ಯದಲ್ಲಿ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಹಲವಾರು ಹೋರಾಟಗಳಿಗೆ ನೇತೃತ್ವ ನೀಡಿ ಮತ್ತೆ ಕರ್ನಾಟಕದ ನಕಾಶೆಯಲ್ಲಿ ನಮ್ಮ ಪಕ್ಷ ಎದ್ದು ಕಾಣುವಂತೆ ಮಾಡಲು ಸಾಧ್ಯವಾಯಿತು.

ಆದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯೆಂದರೆ, ಸಿಪಿಐ–ಸಿಪಿಐ [ಎಂ] ಪಕ್ಷಗಳ ಒಕ್ಕೂಟ ವೆಂಬ ಅರ್ಥಹೊಂದಿದ ನಮ್ಮ ರಾಜ್ಯ ಸಮಿತಿಯ ಮುಖಂಡತ್ವ ಎರಡೂ ಪಕ್ಷಗಳ ಸಮಾವೇಶ ಕರೆದುದರ ಪರಿಣಾಮವಾಗಿ ಜಲಂಧರ್ ರಾಜಕೀಯ ನಿಲುವಿಗೆ ಅಪಾರ್ಥ ತಂದಂತಾಗಿದೆಂಬುದನ್ನು ಕೇಂದ್ರ ಸಮಿತಿ ರಾಜ್ಯ ಮುಖಂಡತ್ವಕ್ಕೆ ತೋರಿಸಿದ ಕೂಡಲೇ, ಆ ತಪ್ಪನ್ನು ತಿದ್ದಿಕೊಂಡು ಸರಿದಾರಿಯಲ್ಲಿ ಪಕ್ಷ ಮುನ್ನಡೆಯುವಂತೆ ಸಂಘಟನಾತ್ಮಕ ಬದಲಾವಣೆ, ಕಾರ್ಯಕ್ರಮ ನಿರೂಪಣೆ ನಿರ್ಧರಿಸಿದುದ್ದರಿಂದ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಮೂರು ಸ್ಥಾನ ಪಡೆಯಲು ಸಾಧ್ಯವಾಯಿತು. ಈ ವರ್ಷದ ಪ್ರಾರಂಭದ ಚುನಾವಣೆಯಲ್ಲಿ ನಮಗೆ ಸ್ವಲ್ಪ ಹಿನ್ನೆಡೆಯಾದರೂ ಕೂಡ, ನಾವು ರಾಜ್ಯಾದ್ಯಂತ ಹಲವಾರು ಚಳುವಳಿ ನಡೆಸಿದ್ದೇವೆ, ನಮ್ಮ ಸಮೂಹಿಕ ಸಂಘಟನೆಗಳ ಬಲ ಹೆಚ್ಚಾಗಿದೆಂಬುದು ಎದ್ದು ಕಾಣುವ ಸಂಗತಿ.

ನಾವು ಸಾಧಿಸಿದ ಯಶಸ್ಸನ್ನು ಭದ್ರಗೊಳಿಸಬೇಕು. ನಮ್ಮ ಪಕ್ಷ, ಸಾಮೂಹಿಕ ಸಂಘಟನೆಗಳು ಹೊಸ ಕ್ಷೇತ್ರಗಳಿಗೆ ವಿಸ್ತಾರಗೊಳ್ಳಬೇಕು. ರಾಜ್ಯದ ಪ್ರತಿಯೊಂದು ತಾಲೂಕು ಮಟ್ಟದಲ್ಲಿಯೂ ಪಕ್ಷ–ಸಾಮೂಹಿಕ ಸಂಘಟನೆ ಬೆಳೆದು ಬರಬೇಕು. ಅದರ ಜೊತೆಯಲ್ಲಿಯೇ ನಮ್ಮ ರಾಜ್ಯದಲ್ಲಿಯ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ ಜನಸಾಮಾನ್ಯರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಪ್ರಭಾವಿತ ಹೋರಾಟ ನಡೆಸುವ ನಿರ್ಧಾರವನ್ನು ಪಕ್ಷದ 12ನೇ ರಾಜ್ಯ ಸಮ್ಮೇಳನದಲ್ಲಿ ಕೈಗೊಳ್ಳೋಣ.

ಆದರ ಜೊತೆಯಲ್ಲಿಯೇ ವಿಜಯವಾಡ ಪಾರ್ಟಿ ಕಾಂಗ್ರೆಸ್ ಎಚ್ಚರಿಸಿದಂತೆ ಈ ಮುಂಚೆ ತಲೆ ಎತ್ತಿದ್ದ ಮತ್ತು ಇನ್ನು ಮುಂದೆಯೂ ನಮ್ಮ ರಾಜ್ಯದಲ್ಲಿ ತಲೆ ಎತ್ತ ಬಹುದಾದ ಬಂಡವಾಳಶಾಹಿ ಮತ್ತು ಪರಿಷ್ಕರಣವಾದಿ ಸಿದ್ಧಾಂತಗಳ ಕೆಲವು ವಿಶಿಷ್ಟ ವಿಚಾರಗಳ ವಿರುದ್ಧವೂ ಸತತವಾದ ಹೋರಾಟ ನಡೆಸಬೇಕಾಗಿದೆ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಎಲ್ಲಾ ಪ್ರಗತಿಶೀಲ ಶಕ್ತಿಗಳೊಂದಿಗೆ ಸಂಯುಕ್ತ ಕಾರ್ಯಾಚರಣೆ ನಡೆಸುವಾಗಲೇ ಸೈದ್ಧಾಂತಿಕ ಹೋರಾಟವನ್ನು ನಡೆಸುವ ಕುರಿತು ಸುದೀರ್ಘ ಚರ್ಚೆ ನಡೆಸಿ ಕಾರ್ಯಕ್ರಮ ಹಾಕಿಕೊಳ್ಳುವುದು, ಆ ಉದ್ದೇಶಕ್ಕಾಗಿ ನಿರಂತರ ಬಿಡುವಿಲ್ಲದ ಪ್ರಚಾರ ಪ್ರಕ್ಷೋಭೆ ನಡೆಸುವುದು ಅಗತ್ಯವಾಗಿರುವುದರಿಂದ ಈ ಸಮಸ್ಯೆಯ ಕುರಿತು ಸುದೀರ್ಘ ಚರ್ಚೆ, ಸ್ಪಷ್ಟ ನಿರ್ಣಯ ಅತ್ಯಗತ್ಯ. ○

ಬಸ್ ದರ – ವಿದ್ಯುಚ್ಛಕ್ತಿ ದರ ಏರಿಕೆಯ ವಿರುದ್ಧ ಹೋರಾಟ

ಬೆಂಗಳೂರಿನಲ್ಲಿ ಐನೂರು ಜನರ ಬಂಧನ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರವನ್ನು ಶೇ 25 ರಿಂದ 50 ರಷ್ಟು ಏರಿಸುವ ನಿರ್ಧಾರವು ಅಕ್ಟೋಬರ್ 12 ರಂದು ಜಾರಿಗೆ ಬಂದಿದ್ದು ಪ್ರಯಾಣಿಕರು ಅಧಿಕ ಹೊರೆಯನ್ನು ಹೊರಬೇಕಾಗಿ ಬಂದಿದೆ ಸರ್ಕಾರಿ ಬಸ್ ಪ್ರಯಾಣವು ದುಬಾರಿಯೆಂದು ಕೆಲವರು ಖಾಸಗಿ ವಾಹನಗಳಲ್ಲಿ, ರೈಲುಗಳಲ್ಲಿ ಪ್ರಯಾಣಿಸುವುದು ಉಚಿತವೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಬಡವರು ಸಮೀಪ ಸ್ಥಳಗಳಿಗೆ ಕಾಲ್ನಡಿಗೆಯೇ ಉತ್ತಮವೆಂದು ತಿಳಿದಿದ್ದಾರೆ. ಇದರೊಂದಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕಳೆದ ಸೆಪ್ಟಂಬರ್ 27 ರಿಂದಲೇ ಶೇ 30 ರಿಂದ 40 ರಷ್ಟು ವಿದ್ಯುತ್ ಶುಲ್ಕವನ್ನು ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಜನತಾ ಸರ್ಕಾರವೂ ಸಹ ಕಾಂಗ್ರೆಸ್ (ಐ) ಸರ್ಕಾರದಂತೆ ಜನಸಾಮಾನ್ಯರ ಹಿತರಕ್ಷಣೆಯನ್ನು ಕಡೆಗಣಿಸಿ ಒಂದರ ಮೇಲೊಂದರಂತೆ ಜನ ವಿರೋಧಿ ಕ್ರಮಗಳನ್ನು ಅನುಸರಿಸುತ್ತಿರುವುದು ವಿಷಾದನೀಯವಾಗಿದೆ. ಹಿಂದೊಮ್ಮೆ ಹಾಲಿನ ದರವನ್ನು ಶೇ. 25ರಷ್ಟು ಏರಿಸಿದ್ದನ್ನು ಸ್ಮರಿಸಬಹುದಾಗಿದೆ.

ಜನತಾ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಹಲವಾರು ಕಡೆ ಸಾಂಕೇತಿಕ ಪ್ರತಿಭಟನೆ ವ್ಯಕ್ತಪಡಿಸಿದ್ದು ಐಕ್ಯ ಹೋರಾಟವನ್ನು ರೂಪಿಸಲು ಪ್ರಯತ್ನಿಸುತ್ತಿದೆ. ಈ ಚಳುವಳಿಯ ಪ್ರಥಮ ಹಂತವಾಗಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪಿಕೆಟಿಂಗ್ ಚಳುವಳಿ ನಡೆಸಿರುವ ವರದಿಗಳು ಬಂದಿವೆ.

ಸಿ. ಪಿ. ಐ. [ಎಂ] ಬೆಂಗಳೂರು ಜಿಲ್ಲಾ 12ನೇ ಸಮ್ಮೇಳನದ ಕರೆಯ ಮೇರೆಗೆ ಅಕ್ಟೋಬರ್ 14 ರಂದು ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶದ ಹಲವಾರು ಸ್ಥಳಗಳಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ಪಿಕೆಟಿಂಗ್ ಚಳುವಳಿಯಲ್ಲಿ ಪಾಲ್ಗೊಂಡರು. ಕೆ. ಎಸ್. ಆರ್. ಟಿ. ಸಿ. ಪ್ರಧಾನ ಕಛೇರಿ, ಕೇಂದ್ರ ಬಸ್ ನಿಲ್ದಾಣ, ಕಾವೇರಿ ಭವನ, ಕೆ.ಇ.ಬಿ. ಕಛೇರಿ, ಕೆಂಗೇರಿ ಬಸ್ ನಿಲ್ದಾಣ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರದಲ್ಲಿ ಮೆರವಣಿಗೆ, ಪ್ರತಿಭಟನಾ ಪ್ರದರ್ಶನಗಳು ಮತ್ತು ಪಿಕೆಟಿಂಗ್ ನಡೆಸಿ ಸುಮಾರು 500 ಮಂದಿ ಕಾರ್ಯಕರ್ತರು ಬಂಧನಕ್ಕೊಳಗಾದರು. ಕೆಲವೆಡೆ ಎಲ್ಲಾ ಪ್ರದರ್ಶನಕಾರರನ್ನೂ ಪೋಲೀಸರು ಬಂಧಿಸಲಿಲ್ಲ. ಹೊಸಕೋಟೆ ರಸ್ತೆಯಲ್ಲಿ ಹಲವಾರು ಬಸ್‌ಗಳನ್ನು ತಡೆದರೂ, ಕೆ.ಇ.ಬಿ. ಕಛೇರಿಯನ್ನು ಘೇರಾಯಿಸಿದರೂ ಬಂಧನ ಮಾಡಲಿಲ್ಲ ಕೊನೆಗೆ ಕಛೇರಿಯನ್ನೇ ಬಂದ್ ಮಾಡಲಾಯಿತು. ಐಕ್ಯ ಹೋರಾಟವನ್ನು ರೂಪಿಸಲು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಪ್ರಯತ್ನಿಸುತ್ತಿದ್ದು ಕೆ.ಜಿ.ಎಫ್.ನಲ್ಲಿ ನಡೆಯಲಿರುವ ಪಕ್ಷದ ರಾಜ್ಯ ಸಮ್ಮೇಳನವು ರಾಜ್ಯವ್ಯಾಪಿ ಆಂದೋಲನವನ್ನು ಯೋಜಿಸುವುದಾಗಿ ಜಿಲ್ಲಾ ಕಾರ್ಯದರ್ಶಿ ಕಾಂ|| ಎಸ್. ಸೂರ್ಯನಾರಾಯಣರಾವ್‌ರವರು ಪತ್ರಿಕಾ ವರದಿಗಾರರಿಗೆ ತಿಳಿಸಿದ್ದಾರೆ. ●

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ಆಹಾರ ಧಾನ್ಯಗಳಲ್ಲಿ ಅಧಿಕ ಉತ್ಪಾದನೆ ?

1983-84 ರಲ್ಲಿ ದೇಶದ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಯು 15/.5 ಮಿ. ಟನ್‌ಗಳ ಹೊಸ ದಾಖಲೆಗೇರಿರುವುದು ಮತ್ತು ಈ ವರ್ಷ ಕೇಂದ್ರ ಸರಕಾರದ ಆಹಾರ ಸಂಗ್ರಹಣೆಯು ಸುಮಾರು 30 ಮಿ. ಟನ್ ಗೇರಿರುವುದು ಹಲವು ಊಹಾಪೋಹಗಳಿಗೂ ವಾದ ವಿವಾದಗಳಿಗೂ ಎಡೆ ಮಾಡಿ ಕೊಟ್ಟಿವೆ. ಕಾಂಗ್ರೆಸ್ ಸರಕಾರದ ವಕ್ತಾರರೂ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರೂ ಈ ವಿದ್ಯಾಮಾನಗಳನ್ನು ಕೃಷಿ ಕ್ಷೇತ್ರದಲ್ಲಿ ಸಂಭವಿಸಿದ ಅದ್ಭುತ ಸಾಧನೆಗಳೆಂದು ಹೊಗಳಿ ಕೊಳ್ಳುವರು. ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದೆ ಹೆಚ್ಚುವರಿ ಆಹಾರ ಧಾನ್ಯಗಳನ್ನು ಹೊರ ದೇಶಗಳಿಗೆ ರಫ್ತು ಮಾಡುವ ಸ್ಥಿತಿಯಲ್ಲಿದೆ, ಹಸಿರು ಕ್ರಾಂತಿ ಯಶಸ್ವಿಯಾಗಿದೆ, ಬಡತನ ಕಡಿಮೆಯಾಗುತ್ತಿದೆ, ಜನರ ಜೀವನ ಮಟ್ಟ ಹೆಚ್ಚುತ್ತಿದೆ ಎಂದು ವಾದಿಸುತ್ತಿದ್ದಾರೆ ಪ್ರಚಾರ ಮಾಡುತ್ತಿದ್ದಾರೆ.

ಆದರೆ, ಸತ್ಯಾಂಶವೇನು ? ಉತ್ಪಾದನೆಯಲ್ಲಿ ಹೆಚ್ಚುವರಿಯೇ ? ಸಂಗ್ರಹಣೆಯಲ್ಲಿ ಹೆಚ್ಚುವರಿಯೇ ? ಜನರ ಅಗತ್ಯತೆಗಳನ್ನು ಪೂರೈಸಿ ಉಂಟಾದ ಹೆಚ್ಚುವರಿಯೇ ? ಜನರ ಕೊಳ್ಳುವ ಶಕ್ತಿಗೆ ಮೀರಿದ ಹೆಚ್ಚುವರಿಯೇ ?

ಉತ್ಪಾದನೆಯಲ್ಲಿ ಮಂದಗತಿ

ದೇಶದ ದೀರ್ಘ ಕಾಲದ ಆಹಾರ ಧಾನ್ಯಗಳ ಉತ್ಪಾದನೆಯನ್ನು ಪರಿಶೀಲಿಸಿದರೆ, ಉತ್ಪಾದನಾ ಹೆಚ್ಚಳದ ದರವು ಮಂದಗತಿಯಾಗಿರುವುದನ್ನೂ, ಜನಸಂಖ್ಯಾ ಹೆಚ್ಚಳದ ದರಕ್ಕಿಂತ ಅತಿ ಸ್ವಲ್ಪ ಏರಿಕೆಯಲ್ಲಿರುವುದನ್ನು ಗಮನಿಸಬಹುದು.

1970-71 ರಿಂದ 1983-84 ರ ಅವಧಿಯಲ್ಲಿ ಆಹಾರ ಉತ್ಪಾದನೆಯ ಹೆಚ್ಚಳದ ದರ (108 ಮಿ. ಟ. ನಿಂದ 151.5 ಮಿ. ಟ.) ಶೇ 2.7 ಪ್ರತಿ ವರ್ಷಕ್ಕೆ.

ಮೇಲಿನ ಅವಧಿಯಲ್ಲಿ ಜನ ಸಂಖ್ಯಾ ಹೆಚ್ಚಳದ ದರ (543 ಮಿ. ದಿಂದ 698 ಮಿ.) ಶೇ. 2.2 ಪ್ರತಿವರ್ಷಕ್ಕೆ.

ಆಹಾರ ಧಾನ್ಯಗಳ ಮಂದಗತಿಯ ಉತ್ಪಾದನಾ ಹೆಚ್ಚಳವೂ ದೇಶಾದ್ಯಂತ ಏಕ ಮುಖವಾಗಿಲ್ಲದಿರುವುದನ್ನೂ ಗಮನಿಸಬೇಕು. 1975-76 ರ 121.03 ಮಿ. ಟನ್‌ಗಳ ಆಹಾರ ಧಾನ್ಯಗಳ ಉತ್ಪಾದನೆಯನ್ನು 1983-84 ರ 151.5 ಮಿ. ಟನ್‌ಗಳ ಆಹಾರ ಧಾನ್ಯಗಳ ಉತ್ಪಾದನೆಯೊಂದಿಗೆ ಹೋಲಿಸಿದಾಗ ವಿವಿಧ ರಾಜ್ಯಗಳ ಉತ್ಪಾದನಾ ಹೆಚ್ಚಳ ದರಗಳ ಏರಿಳಿತಗಳು ಈ ಕೆಳಗಿನ ಅಂಕಿ ಅಂಶಗಳಿಂದ ತಿಳಿಯುವುವು.

ರಾಜ್ಯಗಳು	ಆಹಾರ ಧಾನ್ಯಗಳ ವಾರ್ಷಿಕ ಉತ್ಪಾದನಾ ಹೆಚ್ಚಳ ದರ	ರಾಜ್ಯಗಳು	ಆಹಾರ ಧಾನ್ಯಗಳ ವಾರ್ಷಿಕ ಉತ್ಪಾದನಾ ಹೆಚ್ಚಳ ದರ
ಪಂಜಾಬ್ :	6.7 %	ಒರಿಸ್ಸಾ :	2.6 %
ಉ. ಪ್ರದೇಶ :	5.2 %	ಮಹಾರಾಷ್ಟ್ರ :	2.2 %
ಹರಿಯಾಣ :	4.0 %	ಅಸ್ಸಾಂ :	1.6 %
ರಾಜಸ್ಥಾನ :	3.3 %	ಆಂಧ್ರ ಪ್ರದೇಶ :	1.4 %
ಗುಜರಾತ್ :	3.0 %	ಪ. ಬಂಗಾಳ :	0.8 %
ಮ ಪ್ರದೇಶ :	3.0 %	ಬಿಹಾರ :	0.6 %
ಅಖಿಲ ಭಾರತ :	2.8 %	ಕರ್ನಾಟಕ :	0.5 %
		ಕೇರಳ :	1.1 %
		ತಮಿಳುನಾಡು :	1.8 %

(ಸಾಧಾರ : ಕೇಂದ್ರ ಸರಕಾರದ ಆರ್ಥಿಕ ಸಮೀಕ್ಷೆ 1984-85 ರ ಆಧಾರದಲ್ಲಿ ರಚಿಸಿದ್ದು. ಕಾರ್ತಿಕ್ ರ್‍ಯಾ ಅವರ ಲೇಖನ, ಪೀಪಲ್ ಡೆಮೊಕ್ರಸಿ : 12-5-85)

ಪ್ರಾದೇಶಿಕ ಅಸಮಾನತೆ

ಆಹಾರ ಉತ್ಪಾದನಾ ಹೆಚ್ಚಳವು ಉತ್ತರದ ರಾಜ್ಯಗಳಿಗೆ, ಮುಖ್ಯವಾಗಿ ಪಂಜಾಬ್, ಹರಿಯಾಣ ಮತ್ತು ಉ. ಪ್ರದೇಶಗಳಿಗೆ ಮೀಸಲಾಗಿದೆ. ಈ ರಾಜ್ಯಗಳಲ್ಲಿ ನೀರಾವರಿ, ಸುಧಾರಿತ ಬೀಜ ಮತ್ತು ಗೊಬ್ಬರಗಳ ಸತತ ಪೂರೈಕೆಯಿಂದಾಗಿ ಗೋಧಿ ಬೆಳೆಯು ವರ್ಷ ವರ್ಷಕ್ಕೂ ಹೆಚ್ಚಿನ ದರದಲ್ಲಿ ವೃದ್ಧಿಯಾಗುತ್ತಿದೆ. ಈ ರಾಜ್ಯಗಳಲ್ಲಿನ ಗೋಧಿ ಉತ್ಪಾದನೆಯು ನೈಸರ್ಗಿಕ ಮಳೆಗಾಳಿಯನ್ನು ಹೆಚ್ಚಾಗಿ ಹೊಂದಿರಬೇಕಾಗಿಲ್ಲ. ಆದರೆ ದೇಶದ ಇತರ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಇನ್ನೂ ನೈಸರ್ಗಿಕ ಮಳೆ ಗಾಳಿಯ ಕೃಪಾ ಕಟಾಕ್ಷದಲ್ಲಿಯೇ ಉಳಿದಿದೆ. ಈ ಭಾಗದ ಬೆಳೆಯು ಮುಖ್ಯವಾಗಿ ಅಕ್ಕಿ ಆಗಿರುವುದರಿಂದ, ಅದರ ಉತ್ಪಾದನಾ ಗತಿಯು ಬಹಳ ನಿಧಾನವಾಗಿರುವುದಲ್ಲದೆ, ಕೆಲವು ರಾಜ್ಯಗಳಲ್ಲಿ ಸ್ಥಗಿತ ಗತಿಯಲ್ಲಿದ್ದು, ಕೇರಳ ಮತ್ತು ತಮಿಳ್‌ನಾಡು ರಾಜ್ಯಗಳಲ್ಲಿ ಇಳಿಮುಖವಾಗಿದೆ. ದೇಶದ ಸುಮಾರು ಶೇ 75 ಭಾಗದಷ್ಟು ಜನರ ಆಹಾರ ಧಾನ್ಯವಾದ ಅಕ್ಕಿ ಬೆಳೆಯು ಅಗತ್ಯತೆಗಿಂತ ಬಹಳ ಹಿಂದಿರುವುದನ್ನು ಗಮನಿಸಬಹುದು. ಅಕ್ಕಿ ಬೆಳೆಯೇ ಪ್ರಧಾನವಾದ ಒಂಭತ್ತು ರಾಜ್ಯಗಳ ಆಹಾರೋತ್ಪಾದನೆಯ ಅಭಿವೃದ್ಧಿ ದರವು ದೇಶದ ಸರಾಸರಿ ಶೇ. 2.8 ಕ್ಕಿಂತಲೂ ಕಡಿಮೆಯಾಗಿರುವುದನ್ನು ಗಮನಿಸಬೇಕು.

ಉತ್ಪಾದನೆಯಲ್ಲಿ ಮತ್ತು ವಿತರಣೆಯಲ್ಲಿ ಸ್ಥಗಿತತೆ, ಪ್ರಾದೇಶಿಕ ಅಸಮಾನತೆಗಳು ಬಂಡವಾಳ ಶಾಹಿ ವ್ಯವಸ್ಥೆಯ ಲಕ್ಷಣಗಳು. ಕೈಗಾರಿಕೆಯ ಸಿಂಹಪಾಲು ಕೆಲವೇ ಗುತ್ತಿದಾರಿ ಕುಟುಂಬಗಳ ಸ್ವಾಮ್ಯದಲ್ಲಿರುವುದರಿಂದಲೂ, ಕೃಷಿಯ ಸಿಂಹ ಪಾಲು ಕೆಲವೇ ದೊಡ್ಡ ಭೂಮಾಲಿಕರ ಶ್ರೀಮಂತ ರೈತರ ಕುಟುಂಬಗಳ ಸ್ವಾಮ್ಯದಲ್ಲಿರುವುದರಿಂದಲೂ ಈ ಸಮಸ್ಯೆಗಳು ತಲೆ ದೋರುವುವು.

ಗ್ರಾಹಕ ಶಕ್ತಿ ಹೀನತೆ, ಅಧಿಕ ಉತ್ಪಾದನೆಯ ಮಿಥ್ಯೆ ;

ಜನಸಂಖ್ಯಾ ಹೆಚ್ಚಳದ ದರಕ್ಕಿಂತ ಆಹಾರ ಧಾನ್ಯಗಳ ಉತ್ಪಾದನಾ ದರವು ದೀರ್ಘಕಾಲದ ಸಮೀಕ್ಷೆಯಿಂದ ದೇಶದ ಬಹು ಭಾಗದಲ್ಲಿ ಕಡಿಮೆಯಾಗಿರುವುದರಿಂದ, ಆಹಾರ ಧಾನ್ಯಗಳಲ್ಲಿ ಅಧಿಕ ಉತ್ಪಾದನೆ ಸಾಧಿಸಲಾಗಿದೆ ಎನ್ನುವವಾದ ಸತ್ಯಕ್ಕೆ ದೂರ. ದೇಶದ 700 ಮಿಲಿಯಕ್ಕೂ ಹೆಚ್ಚಿನ ಜನಸಂಖ್ಯೆಯಲ್ಲಿ ಇನ್ನೂ ಅರ್ಧಾಂಶದಷ್ಟು ಜನರು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿ ಬದುಕುತ್ತಿದ್ದಾರೆ. ಇವರ ದೈನಿಕ ಆಹಾರ ಸೇವನೆಯು ಜೀವನಾವಶ್ಯಕ ಕನಿಷ್ಟ ಶಕ್ತಿ ಹಾಗೂ ಪೌಷ್ಟಿಕತೆ ನೀಡುವಷ್ಟು ಇರುವುದಿಲ್ಲ. ದೇಶದ ಎಲ್ಲಾ ಜನರೂ ದಿನಕ್ಕೆ ಮೂರು ಹೊತ್ತು ಹೊಟ್ಟೆ ತುಂಬಾ ಉಣ್ಣುವಷ್ಟು ನಮ್ಮ ಆಹಾರ ಉತ್ಪಾದನೆಸಾಲದು. ಗ್ರಾಮೀಣ ಪ್ರಾದೇಶಗಳ ಭೂರಹಿತ ಕೃಷಿ ಕಾರ್ಮಿಕರು, ಬಡರೈತರು ಮತ್ತು ಗ್ರಾಮೀಣ ಪ್ರದೇಶಗಳಿಂದ ವಲಸೆ ಹೋದ ನಗರ ಪ್ರದೇಶಗಳ ಕೊಳಚೆ ಪ್ರದೇಶಗಳಲ್ಲಿರುವ ಅಸಂಖ್ಯಾತ ಬಡವರು ನಿರುದ್ಯೋಗಿಗಳೂ ಅರೆ ಉದ್ಯೋಗಿಗಳೂ ಆಗಿರುವುದರಿಂದ ಅವರ ದೈನಿಕ-ಮೂಲ ಆದಾಯವು ಅತ್ಯಲ್ಪವಾಗಿದ್ದು, ಹೊಟ್ಟೆಗೆ ಬೇಕಾದಷ್ಟು ಹಿಟ್ಟು ಕೊಳ್ಳಲು ಅವರು ಅಸಮರ್ಥರಾಗಿದ್ದಾರೆ. ಆದುದರಿಂದ, ಸರಕಾರದ ಗೋದಮುಗಳಲ್ಲಿ ಇಂದು 30 ಮಿ. ಟ ಆಹಾರ ಧಾನ್ಯಗಳ ಸಂಗ್ರಹವಿದೆ ಎಂದರೆ 700ಮಿ ಜನರು ಬೇಕಾದಷ್ಟು ತಿಂದು ಉಂಡು ಉಳಿದಿರುವುದು ಎಂದು ತಿಳಿಯುವುದು ತಪ್ಪು. ಇವರಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚಿನ ಬಡಜನರಿಗೆ ತಮಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಖರೀದಿಸುವ ಗ್ರಾಹಕ ಶಕ್ತಿ, ಉದ್ಯೋಗ ಆದಾಯ ಇಲ್ಲ ಎಂದು ನೆನಪಿಸಿಕೊಳ್ಳಬೇಕು. ಕ್ಷಣಕ್ಷಣಕ್ಕೂ ಏರುತ್ತಿರುವ ಹಣದುಬ್ಬರದಿಂದಾಗಿ ಅವರ ಅಲ್ಪಸ್ವಲ್ಪ ಆದಾಯದ ನಿಜ ಮೌಲ್ಯವೂ ಕುಸಿಯುತ್ತಿದ್ದು, ಆಹಾರ ಧಾನ್ಯಗಳಂತಹ ಜೀವನಾವಶ್ಯಕ ವಸ್ತುಗಳನ್ನೂ ಅವರು ಕೊಂಡುಕೊಳ್ಳಲು ಅಶಕ್ತರಾಗಿದ್ದಾರೆ.

ಹೀಗೆ ಹತ್ತಿ ಬಟ್ಟೆ, ಸೆಣಬು, ಸಕ್ಕರೆ, ಉಕ್ಕು ಇತ್ಯಾದಿ ಕೈಗಾರಿಕಾ ಉತ್ಪಾದನೆಗಳಿಗೆ ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿದ್ದು, ಅಧಿಕ ಉತ್ಪಾದನೆಯ ಸಮಸ್ಯೆ ಉಂಟಾಗಿದೆಯೋ, ಹಾಗೆಯೇ ಈಗ ಕೃಷಿ ಉತ್ಪಾದನೆಗಳಿಗೆ, ಮುಖ್ಯವಾಗಿ ಆಹಾರ ಧಾನ್ಯಗಳಿಗೆ ಆಂತರಿಕ ಮಾರುಕಟ್ಟೆ ಇಲ್ಲದೆ, ಜನರಿಗೆ ಗ್ರಾಹಕ ಶಕ್ತಿ ಇಲ್ಲದೆ ಅಧಿಕ ಉತ್ಪಾದನೆಯ ಹೆಚ್ಚುವರಿ ದಾಸ್ತಾನಿನ ಸಮಸ್ಯೆ ಉಂಟಾಗಿದೆ. ಸಮೃದ್ಧಿಯ ಮಧ್ಯೆ ದಾರಿದ್ರ್ಯ, ಅಧಿಕ ಉತ್ಪಾದನೆಯ ಮಧ್ಯೆ ಕೊರತೆ ಹಾಗೂ ಹಸಿವು ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆಯ ವಿರೋಧ ಭಾಸಗಳು. ಈ ವಿರೋಧ ಭಾಸಗಳಗಳನ್ನು ಕಾರ್ಲ್‌ಮಾರ್ಕ್ಸ್ ಯುರೋಪಿನ ಬಂಡವಾಳ ಶಾಹಿ ದೇಶಗಳಲ್ಲಿ ನೂರುವರ್ಷಗಳ ಹಿಂದೆಯೇ ಗುರುತಿಸಿದ್ದರು. ಇಂದಿಗೂ ಅವುಗಳು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ಬಂಡವಾಳ ಶಾಹಿ ಸಮಾಜಗಳಲ್ಲಿ ಕಂಡು ಬರುತ್ತಿವೆ.

ಬಂಡವಾಳ ಶಾಹಿ ಸಮಾಜದಲ್ಲಿ ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆಗಳಿಗೆ ಆಂತರಿಕ ಮಾರುಕಟ್ಟೆ ಇಲ್ಲದಿದ್ದರೆ, ಅಂತರಾಷ್ಟ್ರೀಯ ಮಾರುಕಟ್ಟೆ ಹುಡುಕಲಾಗುವುದು. ಅದು ಸಿಗದಿದ್ದರೆ, ಬೆಲೆ ಕುಸಿತ ತಡೆಯಲು ಉತ್ಪಾದಿತ ವಸ್ತುಗಳನ್ನು ಧ್ವಂಸ ಮಾಡುವರೇ ಹೊರತು ಜನಸಾಮಾನ್ಯರ ಅಗತ್ಯತೆಗಳನ್ನು ಪೂರೈಸಲು ಮರು ವಿತರಣೆ ಮಾಡಲಾಗುವುದಿಲ್ಲ. ಉತ್ಪಾದಕರಿಗೆ-ಕಾರ್ಮಿಕರಿಗೆ ಉತ್ಪಾದನೆಯ ಪೂರ್ಣಪ್ರತಿಫಲ ದೊರೆಯಲಾರದು ಬದಲು ಅಧಿಕ ಉತ್ಪಾದನೆಯ ನೆಪದಲ್ಲಿ ಅವರು ತಮ್ಮ ಉದ್ಯೋಗಗಳನ್ನೇ ಕಳೆದು ಕೊಳುವ ಸಂಭವ ಇದೆ! ಅಮೇರಿಕದಲ್ಲಿ ಗೋಧಿ ಬೆಳೆನಾಶ, ಯುರೋಪಿನಲ್ಲಿ ಹಾಲು ಬೆಣ್ಣೆ, ಮಾಂಸಗಳ ಅಧಿಕ ಉತ್ಪಾದನೆಯ ನೆಪದಲ್ಲಿ ದನ ಕರುಗಳ ಸಾಮೂಹಿಕ ಕಗ್ಗೊಲೆ, ಇತ್ಯಾದಿ ಬಂಡವಾಳ ಶಾಹಿ ವ್ಯವಸ್ಥೆಯ ವೈರುಧ್ಯಗಳು.

ಭಾರತದಲ್ಲಿಯೂ ಆಹಾರ ಧಾನ್ಯಗಳ ಅಧಿಕ ಉತ್ಪಾದನೆಯ ನೆಪದಲ್ಲಿ- 30 ಮಿ ಟ. ಸರಕಾರಿ ಸಂಗ್ರಹಣೆಯ ಸ್ವಲ್ಪಾಂಶವನ್ನು ರಫ್ತು ಮಾಡಲು ಸಿದ್ಧತೆ ನಡೆಯುತ್ತಿದೆ. ಇಷ್ಟರವರೆಗೆ ಸಾಮಾನ್ಯವಾಗಿ ಸರಕಾರದ ಸಂಗ್ರಹಣೆ ಒಟ್ಟು ಉತ್ಪಾದನೆಯ ಶೇ. 10 ರಷ್ಟು ಮಾತ್ರವಿದ್ದು, ಈಗ ಶೇ. 20 ಕ್ಕೇರಿದೆ. ಜನರ ಗ್ರಾಹಕ ಶಕ್ತಿ ಕ್ಷೀಣಿಸುತಿದಂತೆ, ಮಾರುಕಟೆಗೆ ಬರುವ ಆಹಾರ ಧಾನ್ಯಗಳಿಗೆ ಹಣಕೊಟ್ಟು ಖರೀದಿಸುವ ಬಡ ಗಿರಾಕಿಗಳು ಕಡಿಮೆಯಾಗುತ್ತಿದ್ದು, ಸರಕಾರದ ಸಂಗ್ರಹಣೆಯು ಹೆಚ್ಚುತ್ತಿದೆ. ಆದರೆ ಬಂಡವಾಳ ಶಾಹಿ ಅರ್ಥಶಾಸ್ತ್ರಜ್ಞರು ಬೇರೆ ವಾದ ಮುಂದಿಡುತ್ತಿದ್ದಾರೆ. ಜನರ ಜೀವನ ಮಟ್ಟ ಹೆಚ್ಚುತ್ತಿದೆ ಎಂದೂ, ಅವರ ಆಹಾರ ಧಾನ್ಯಗಳ ಬೇಡಿಕೆ ಕಡಿಮೆಯಾಗುತ್ತಿದೆ ಎಂದೂ, ಕೈಗಾರಿಕಾ ಅವಶ್ಯಕ ವಸ್ತುಗಳ ಬೇಡಿಕೆ ಹೆಚ್ಚುತ್ತಿದೆ ಎಂದೂ ವಾದಿಸಲಾಗುತ್ತಿದೆ. ಈ ವಾದ ಸತ್ಯಕ್ಕೆ ದೂರ. ಜನರ ಜೀವನ ಮಟ್ಟ ಹೆಚ್ಚಿದರೆ ಅವರ ಆಹಾರ ಧಾನ್ಯಗಳ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ (ದನಕರುಗಳ ಮೇವಿಗೆ) ಬೇಡಿಕೆ ಹೆಚ್ಚಾಗ ಬೇಕಿತ್ತು. ಇದು ಅಭಿವೃದ್ಧಿ ಹೊಂದಿದ ಸಮಾಜವಾದಿ ರಾಷ್ಟ್ರಗಳ ಅನುಭವ.

ಜನಜೀವನ ಮಟ್ಟ ಹೆಚ್ಚಿಸಬಹುದೇ ?

ಸರಕಾರದ ಸಂಗ್ರಹಣೆಯಲ್ಲಿರುವ ಹೆಚ್ಚುವರಿ ಆಹಾರ ಧಾನ್ಯಗಳನ್ನು ರಫ್ತು ಮಾಡುವ ಬದಲು ಜನಪರವಾಗಿ ಹೇಗೆ ಬಳಸಬಹುದು ?

ಆಹಾರ ಧಾನ್ಯಗಳನ್ನು ಸಾರ್ವಜನಿಕ ವಿತರಣೆಗಾಗಿ ಪಡಿತರ ಅಂಗಡಿಗಳ ಮೂಲಕ ಬಿಡುಗಡೆ ಮಾಡುವುದರೊಂದಿಗೇ, ಮುಂಬಯಿ, ಕಲ್ಕತ್ತಾ, ದೆಹಲಿ, ಮದ್ರಾಸ್ ಮುಂತಾದ ಪ್ರಮುಖ ನಗರಗಳ ಮುಕ್ತ ಮಾರುಕಟ್ಟೆಗಳಲ್ಲಿಯೂ ಬಿಡುಗಡೆ ಮಾಡಬಹುದು. ಆಗ ಆಹಾರ ಧಾನ್ಯಗಳ ಬೆಲೆಗಳು ಇಳಿಮುಖವಾಗಿ ನಗರದ ಅಸಂಖ್ಯಾತ ಬಡ ಜನರು ಸುಲಭ ಬೆಲೆಗೆ ಆಹಾರ ಧಾನ್ಯಗಳನ್ನು ಕೊಂಡು ಕೊಳ್ಳಬಹುದು. ವ್ಯಾಪಾರಸ್ಥರ ಲಾಭ ಬದುಕತನ ಕಡಿಮೆ ಮಾಡಬಹುದು. ಭಾರತದಲ್ಲಿ ಮಾತ್ರ ಸರಕಾರದ ಆಹಾರ ಧಾನ್ಯಗಳ ಸಂಗ್ರಹಣೆಯನ್ನು ಮುಕ್ತ

(7ನೇ ಪುಟ ನೋಡಿ)

ಸಿ. ಪಿ. ಐ. [ಎಂ] ನ 12ನೇ ರಾಜ್ಯ ಸಮ್ಮೇಳನ

ಐಕ್ಯರಂಗ ಓದಿರಿ, ಮಾರಾಟ ಮಾಡಿರಿ, ವಿಸ್ತಾರಗೊಳಿಸಿರಿ

ಸೋವಿಯತ್ ರಶ್ಯಾದಲ್ಲಿ ಲೆನಿನ್ನರ ವಸ್ತು ಸಂಗ್ರಹಾಲಯಕ್ಕೆ ಹೋದಾಗ ದೊಡ್ಡಕ್ಷರದಲ್ಲಿ ಬರೆದ ಲೆನಿನ್ನರ ಲಿಖಿತ ಕಣ್ಣು ಕುಕ್ಕುವಂತೆ ನನ್ನನ್ನು ಸ್ವಾಗತಿಸಿತು. "ಪಕ್ಷದ ಪತ್ರಿಕೆ ಸಂಘಟಕನಾಗಿ ಪ್ರಚಾರಕನಾಗಿ, ಪ್ರಕ್ಷೋಭಕಾರನಾಗಿರಬೇಕು."

ಅಲ್ಪ ಆರ್ಥಿಕಾಭಿಲಾಷೆಗೆ ಬಲಿಬೀಳುವ, ಜಾತಿ-ಮತ-ಪಂಥ-ಧರ್ಮಗಳಲ್ಲಿ ಮುಳುಗೇಳುತ್ತಿರುವ, ಅತ್ಯಂತ ಕೀಳ್ಮಟ್ಟದ ಸಾಂಸ್ಕೃತಿಕ ಪರಿಜ್ಞಾನ, ಹೊಂದಿರುವ, ಸಮಾಜದಲ್ಲಿ ಅತ್ಯಂತ ಕೆಳಮಟ್ಟದಲ್ಲಿ ತಾನು ಹುಟ್ಟಿ, ಬೆಳೆದು, ಸಾಯುವ ಹಕ್ಕನ್ನಷ್ಟೇ ಹೊಂದಿದವರೆಂದು ತಿಳಿದಿರುವ ಅದೇ ತನ್ನ ಸರ್ವ ಸುಖ, ಸ್ವರ್ಗ, ಮೇಲ್ವರ್ಗಕ್ಕೂ ತಮಗೂ ಏನೂ ಸಂಬಂಧವೇ ಇಲ್ಲೆಂದು ತಿಳಿದಿರುವ ಕೆಳವರ್ಗದ ಜನರಲ್ಲಿ ಕಾರ್ಮಿಕ ವರ್ಗದಲ್ಲಿ [ರಾಜಕೀಯ ಜಾಗೃತಿಯನ್ನುಂಟು ಮಾಡಿ "ಅದೋ ನೋಡು ಅಲ್ಲಿದೆ ನಿನ್ನ ಸ್ವರ್ಗ, ನಿನ್ನ ಸಮಾಜ, ನಿನ್ನ ಜೀವನ.ನಿನ್ನ ಕಣ್ಣಿನ, ಮನಸ್ಸಿನ, ಜೀವನದ ಪರೆಯನ್ನು ಹರಿದೊಗೆದು, ನಿನ್ನನ್ನು ಸುಲಿಯುವ, ನರಕದಲ್ಲಿ ತಳ್ಳುವ, ಕಗ್ಗತ್ತಲೆಯಲ್ಲಿ ಮೂಲೆ ಗುಂಪು ಮಾಡಿರುವ, ನಿನ್ನ ಅದೃಷ್ಟವೇ ಅಷ್ಟಕ್ಕೆ ಮಿತಿಗೊಂಡಿದೆಂದು ಹೇಳುವ ಮೇಲ್ವರ್ಗವನ್ನು, ಬಂಡವಳಶಾಹಿ ಸಮಾಜವನ್ನು ಕಿತ್ತೊಗೆಯಬೇಕು, ಹೊಸ ಸಮಾಜ ನಿರ್ಮಿಸಬೇಕು; ಸುಲಿಗೆ ನಿರತ ಸಮಾಜ, ಕೆಳಗಿನ ದುಡಿಯುವ ವರ್ಗ ಅಧಿಕಾರ ಚಲಾಯಿಸುವ ಸಮಾಜ ರಚಿಸಬೇಕು. ಅದಾಗಬೇಕಾದರೆ, ಮಾರ್ಕ್ಸ್‌ವಾದ ಲೆನಿನ್‌ವಾದ ಸಿದ್ಧಾಂತದ ತಳಹದಿಯಲ್ಲಿ ಕಾರ್ಮಿಕರ ಸಂಘಟನೆ ಮಾಡಿ, ಕಾರ್ಮಿಕ ವರ್ಗದ ರಾಜಕೀಯ ಪಕ್ಷ ಕಟ್ಟಿ, ನಿರಂತರ ಹೋರಾಟಗಳ ಮೂಲಕ ಜನ ಸಮೂಹದಲ್ಲಿ ರಾಜಕೀಯ ಪ್ರಜ್ಞೆಯನ್ನುಂಟು ಮಾಡಿ, ವರ್ಗ ಸಂಘರ್ಷ ನಡೆಸಿ, ಸುಲಿಯುವ ವರ್ಗವನ್ನು ಅಧಿಕಾರದಿಂದ ಕಿತ್ತೊಗೆದು, ಕಾರ್ಮಿಕ ವರ್ಗದ ಆಧಿಪತ್ಯವನ್ನು ರಚಿಸಬೇಕು. ಸುಲಿಯುವ ವರ್ಗ ಸರ್ವನಾಶವಾಗಿ ಮತ್ತೊಮ್ಮೆ ತಲೆ ಎತ್ತದಂತೆ ಮಾಡಬೇಕು, ಈ ಸಮಾಜ ಈ ದೇಶ, ಈ ಜಗತ್ತು ನಿನ್ನದು. ಏಳು ಎದ್ದೇಳು, ಕ್ರಾಂತಿಗೆ ಸಿದ್ಧನಾಗು" ಎಂದು ತುಳಿಯಲ್ಪಟ್ಟವರನ್ನೂ, ದುಡಿಯುವವರನ್ನೂ ಕ್ರಾಂತಿಗೆ ಅಣಿಗೊಳಿಸಬೇಕಾದರೆ ಲೆನಿನ್ ರಶ್ಯದ ಕ್ರಾಂತಿಯ ಮುಂಚೆಯೇ, ಕ್ರಾಂತಿಗಾಗಿ ರಶ್ಯದ ಕಾರ್ಮಿಕ ವರ್ಗವನ್ನು, ಸೈನಿಕರನ್ನು, ಬಡ-ಮಧ್ಯಮ ರೈತರನ್ನು, ಯುವಕರನ್ನು ಸಿದ್ಧಗೊಳಿಸುತ್ತಿರುವಾಗಲೇ ಪಾರ್ಟಿ ಪತ್ರಿಕೆಯ ಮೂರು ಮಹಾ ಕರ್ತವ್ಯಗಳ ಕುರಿತು ಪಕ್ಷದ ಸದಸ್ಯರ ಗಮನ ಸೆಳೆದಿರುವುದನ್ನು ನೆನಪಿಸಿಕೊಳ್ಳುವುದು ಅತ್ಯಗತ್ಯ

ನಮ್ಮ ಪಕ್ಷದ ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಾಹಿತ್ಯ ಮಾರಾಟ, ಪತ್ರಿಕೆ ಮಾರಾಟಗಳ ಕುರಿತು ಸುಸ್ವರ, ಕೆಳ ಘಟಕಗಳ ಗಮನ ಸೆಳೆಯುತ್ತಲೇ ಬಂದಿದೆ. ಹಗುರವಾಗಿ ದೊರಕುವ ಕುಂಟು ನೆವಗಳನ್ನು ಮುಂದೆ ಮಾಡಿ, ಕೇಂದ್ರದ ಆದೇಶಗಳನ್ನು ಕಾರ್ಯ ರೂಪದಲ್ಲಿ ಅನುಷ್ಠಾನದಲ್ಲಿ ತರುವುದರಲ್ಲಿ ನಾವೆಲ್ಲ ವಿಫಲರಾಗುತ್ತಿದ್ದೇವೆ.

ನಾನು ಪಕ್ಷಕ್ಕೆ ಸೇರಿದ್ದ 1940 ರ ನಂತರ 1956 ರ ತನಕ ಪಕ್ಷದ ಸದಸ್ಯರು, ಸಾಮೂಹಿಕ ಸಂಘಟನೆಗಳಲ್ಲಿರುವ ಕಾರ್ಯಕರ್ತರು, ಸಣ್ಣ ಗುಂಪುಗಳಾಗಿ ಪಕ್ಷದ ಪತ್ರಿಕೆ-ಪುಸ್ತಕ ಮಾರಾಟ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದರು. ಪ್ರತಿಯೊಂದು ಮನೆ ಅಂಗಡಿಗಳಿಗೆಲ್ಲ ಸುತ್ತಾಡಿ ಸಾಹಿತ್ಯ ಮಾರಾಟ ಮಾಡುತ್ತಿದ್ದರು. 1948-55 ರಲ್ಲಿ ರಾಜ್ಯದಲ್ಲಿ ನಮ್ಮ ಪಕ್ಷ ಈಗಿನಷ್ಟು ಪ್ರಚಾರದಲ್ಲಿಲ್ಲದಿದ್ದರೂ ಕೂಡ, ಪ್ರದೇಶಗಳಲ್ಲಿ ಹರಡಿರದಿದ್ದರೂ ಕೂಡ ಈಗಿನಕ್ಕಿಂತ ಮೂರು ಪಟ್ಟು ಹೆಚ್ಚು ಪಕ್ಷದ ಪತ್ರಿಕೆಯನ್ನೂ ಪುಸ್ತಕಗಳನ್ನೂ ಮಾರಾಟ ಮಾಡಲು ಸಾಧ್ಯವಾಗುತ್ತಿತ್ತು. ಆಗ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಚಳುವಳಿ, ಸಂಸ್ಥಾನಗಳ ವಿರುದ್ಧ ಚಳುವಳಿ, ಏಕೀಕರಣ ಚಳುವಳಿ, ಗೋವಾ ಸತ್ಯಾಗ್ರಹ, ಭೂಮಿ ಹಕ್ಕಿಗಾಗಿ, ಗೇಣಿ ಕಡಿತಕ್ಕಾಗಿ ರೈತರು ನಡೆಸುತ್ತಿದ್ದ ಹೋರಾಟ, ಕಾರ್ಮಿಕರ ಹೋರಾಟಗಳೆಲ್ಲ ಸಾರ್ವಜನಿಕರ ಗಮನ ಸೆಳೆಯುತ್ತಿದ್ದವು ಆ ಕಾರಣದಿಂದ ನಮ್ಮ ಪತ್ರಿಕೆಯನ್ನು ಒಂದು ಪಕ್ಷಕ್ಕೆ ಸ್ಥೀಮಿತವಾಗಿರುವ ಪತ್ರಿಕೆಯೆಂದು ಪರಿಗಣಿಸದೆ, ಸಾರ್ವಜನಿಕರಲ್ಲೂ ಆ ಪತ್ರಿಕೆ ವಿಶಾಲವಾಗಿ ಮಾರಾಟವಾಗುತ್ತಿತ್ತು.

ಈಗ ಯಾಕೆ ಇಂಥ ಪರಿಸ್ಥಿತಿ ? ನಾವೆಲ್ಲಿ ತಪ್ಪಿದ್ದೇವೆ ? ಹಿಂದಿನಂತೆ ಸಾರ್ವಜನಿಕರನ್ನು ಆಕರ್ಷಿಸುವ ಸಮಸ್ಯೆಗಳಿಲ್ಲವೆ ? ಅಂಥ ಸಮಸ್ಯೆಗಳಿಗೆ ಪತ್ರಿಕೆಯಲ್ಲಿ ಪ್ರಚಾರ ಕೊಡುವುದಿಲ್ಲವೇ ? ಪಕ್ಷದ ಕಾರ್ಯಕರ್ತರಲ್ಲಿ ಕ್ರಾಂತಿಕಾರಿ ಮನೋಭಾವ ಕುಂದಿದೆಯೇ ?

ಸಾರ್ವಜನಿಕರಿಗೆ ಸಂಬಂಧಪಟ್ಟ, ಅವರ ಗಮನ ಸೆಳೆಯುವ ಅಭಿವೃದ್ಧಿ ಕಾರ್ಯಗಳ, ಬೆಲೆ ಏರಿಕೆ, ನಿರುದ್ಯೋಗಗಳ, ರಾಜಕೀಯ ಸಮಸ್ಯೆಗಳ, ಭ್ರಷ್ಟಾಚಾರ. ಸ್ವಜನ ಪಕ್ಷಪಾತಗಳಂಥ ಸಮಸ್ಯೆಗಳು ಪಕ್ಷದ ಪತ್ರಿಕೆಗಳಲ್ಲಿ ಈಗಲೂ ಪ್ರಮುಖ ಸ್ಥಾನ ಪಡೆಯುತ್ತಿವೆ ಹಾಗೆಯೇ ರೈತ ಕಾರ್ಮಿಕರ, ವಿದ್ಯಾರ್ಥಿ ಯುವಜನತೆಯ ಮಹಿಳೆಯರ ಸಮಸ್ಯೆ, ಹೋರಾಟಗಳೂ, ಸಾಕಷ್ಟು ಪ್ರಧಾನವಾಗಿಯೇ ಪ್ರಕಟಿಸಲ್ಪಟ್ಟವೆ. ದೇಶ ವಿದೇಶಿ ಸುದ್ದಿಗಳೇಗೇನೂ ಕೊರತೆಯಿಲ್ಲ. ಆದರೆ ಪತ್ರಿಕೆ ಜನಸಮುದಾಯದ ಮಧ್ಯೆ ನಲಿದಾಡುತ್ತಿಲ್ಲ. ಯಾಕೆ ? ಗೊತ್ತೇ ? ಎಲ್ಲರಿಗೂ ಗೊತ್ತು. ಹಳಬರಿಗಂತೂ ಚೆನ್ನಾಗಿ ಗೊತ್ತು. ಪಕ್ಷದ ಪತ್ರಿಕೆ ಓದಬೇಕು, ಓದಿಸಬೆಕೆಂಬ ಪ್ರಾಥಮಿಕ ಭಾವನೆ ಪಕ್ಷದ ಸದಸ್ಯರಲ್ಲಿ ಕುಂದಿರುವುದು, ಪತ್ರಿಕೆ ಕೊಂಡರೂ ಹಣ ಸಂದಾಯ ಮಾಡದಿರುವುದು. ಹಣ ಪಡೆದರೂ ಕೇಂದ್ರಕ್ಕೆ ಕಳುಹಿಸಿಕೊಡಲು ತಪ್ಪುವುದು, ಅದಕ್ಕೆ ತಪ್ಪಿದರೂ ಸಂಬಂಧಪಟ್ಟ ಕಮಿಟಿ ಅಂಥವರ ಮೇಲೆ ಕ್ರಮಕೈಗೊಳ್ಳದೆ "ಮುಲಾಜು" ತೋರಿಸುತ್ತಿರುವುದು ಮುಖ್ಯ ಕಾರಣ. ನಲ್ವತ್ತೈದು ವರ್ಷಗಳ ಹಿಂದೆ ಪ್ರತಿಯೊಂದು ಘಟಕ ಕಮಿಟಿಗಳಲ್ಲಿ ಪತ್ರಿಕೆಯ ಕುರಿತು, ಮಾರಾಟದ ಕುರಿತು ಚರ್ಚೆಯಾಗುತ್ತಿತ್ತು, ಈಗ ಅದರ ಅಭಾವ ಕಂಡು ಬರುತ್ತಿದೆ.

"ಕ್ರಾಂತಿಕಾರಿ ಪಕ್ಷ ಒಂದಕ್ಕೆ ಪಕ್ಷದ ಪತ್ರಿಕೆ 'ಶಿಕ್ಷಕನೂ ಹೋರಾಟಗಾರನೂ ಸಂಘಟಕ ಮತ್ತು ನಾಯಕ' ಆಗಿರುತ್ತದೆ. ಹೀಗೆ ಆಗಿರುವಂತೆ ಮಾಡಲು ರಾಜ್ಯ ಸಮಿತಿ ಮತ್ತು ಸಂಬಂಧಿಸಿದ ಘಟಕ ಪ್ರಯತ್ನಿಸಬೇಕು" ಎಂದಿದ್ದ ಮೈಸೂರು ಪ್ಲೀನಂ "ದುರಾದೃಷ್ಟದಿಂದ ನಮ್ಮ ಸಮಿತಿಗಳು ಇದಕ್ಕೆ ಸಾಕಷ್ಟು ಗಮನ ಕೊಡುವುದಿಲ್ಲ" ಎಂದು ಹೇಳಿತ್ತು. ಈ ದೌರ್ಬಲ್ಯವನ್ನು ನಿವಾರಿಸಲು ನಿರ್ಧರಿಸಲಾಗಿತ್ತು. ಆದರೂ ಐಕ್ಯರಂಗ ಪತ್ರಿಕೆಯ ಪ್ರಸಾರ ಹೇಳಿಕೊಳ್ಳುವಷ್ಟು ಮುಂದುವರಿಯುತ್ತಿಲ್ಲ ಅದರಿಂದಾಗಿ ಅಧಿಕ ಆರ್ಥಿಕ ತೊಂದರೆಗಳನ್ನು ಅನುಭವಿಸಬೇಕಾಗುತ್ತಿದೆ. [ಪತ್ರಿಕೆಯ ಪ್ರಸಾರ ಹೆಚ್ಚಿಸಲು ಉತ್ತಮ ಮಾದಿ, ಲೇಖನಗಳನ್ನು ಕಳುಹಿಸಿ ಕೊಡಲು ರಾಜ್ಯ ಸಮಿತಿ ಕೆಳಗಿನ ಘಟಕಗಳಿಗೆ ಕರೆ ನೀಡಿದ್ದರೂ ಅದರಿಂದೇನೂ ಪ್ರಯೋಜನವಾಗಲಿಲ್ಲ.

ರಾಜ್ಯದಲ್ಲಿ ಒಂದು ಬಲಿಷ್ಟ ಪಕ್ಷ ಕಟ್ಟುವ ಹಾಗೂ ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ ಸಮರ್ಥ ಸೈದ್ಧಾಂತಿಕ ಹಾಗೂ ರಾಜಕೀಯ ಮಾರ್ಗದರ್ಶನ ನೀಡುವ ಕೆಲಸವನ್ನು ರಾಜ್ಯ ನಾಯಕತ್ವ ನಿರ್ವಹಿಸುತ್ತಿರುವಾಗ ಅದಕ್ಕೆ ಪೂರಕವಾಗಿ ಪಕ್ಷದ ಮುಖ ಪತ್ರಿಕೆ "ಐಕ್ಯರಂಗ"ವನ್ನು ಹೆಚ್ಚು ಪ್ರಸಾರಗೊಳಿಸುವುದು, ಅದನ್ನು ಇನ್ನೂ ಆಕರ್ಷಣೀಯವಾಗಿ ಮಾಡುವುದು ಅತ್ಯಗತ್ಯ.

ಅದಾಗ ಬೇಕಾದರೆ ಸಾಲ್ಕಿಯಾ ಪ್ಲೀನಂ ನಿರ್ಣಯದಲ್ಲಿ ಗಮನ ಸೆಳೆದಂತೆ "ಪಕ್ಷದ ಪತ್ರಿಕೆಗಳು ಮತ್ತು ಅವುಗಳ ಸಂಪಾದಕೀಯ ಕೆಲಸವು ಸಾಮಾನ್ಯವಾಗಿ ವೈಯಕ್ತಿಕ ಕಾಮ್ರೇಡರುಗಳ ಸ್ವತ್ತಾಗುತ್ತಿದೆ. ಅನೇಕ ಪ್ರಮುಖ ಕಾಮ್ರೇಡರುಗಳು ಪತ್ರಿಕೆಗೆ ಲೇಖನಗಳನ್ನು ಬರೆಯುವುದಿಲ್ಲ" ಎಂಬುದನ್ನು ತಿದ್ದಬೇಕು, ಸರಿಪಡಿಸಬೇಕು. ಪ್ರಮುಖ ಕಾಮ್ರೇಡರುಗಳಷ್ಟೇ ಅಲ್ಲ, ರಾಜ್ಯಾದ್ಯಂತ ದಿನನಿತ್ಯದ ಹೋರಾಟಗಳಲ್ಲಿ ತೊಡಗಿರುವ, ಹೋರಾಟಗಳ ಅನುಭವ ಪಡೆದಿರುವ ಸಂಗಾತಿಗಳೂ ತಂತಮ್ಮ ಅನುಭವಗಳು ಪಕ್ಷದ ಪತ್ರಿಕೆಗಳಲ್ಲಿ ಅಚ್ಚಾಗುವಂತೆಯೂ ಅದರ ಅನುಭವ ಬೇರೆಯವರಿಗೂ ಸಿಗುವಂತೆಯೂ ಮಾಡುವುದು ಅತ್ಯಗತ್ಯವೆಂದು ಇನ್ನೂ ಮನವರಿಕೆ ಮಾಡಿಕೊಂಡಿಲ್ಲ.

ಬಂಡವಾಳಶಾಹಿ ಸರಕಾರದ ಬದಲಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವ ಸರಕಾರ ರಚಿಸಲ್ಪಡಬೇಕಾದರೆ, ರಾಜಕೀಯ ಜ್ಞಾನ, ತಿಳುವಳಿಕೆ ಹೊಂದಿರುವ ಕಾರ್ಮಿಕ ವರ್ಗ, ಬಲಿಷ್ಟವಾದ ರಾಜಕೀಯ ಪಕ್ಷ ಬೆಳೆದು ಬರುವುದು ಅತ್ಯಗತ್ಯ. ಅಂಥ ಪಕ್ಷದ ನೀತಿ ನಿರೂಪಣೆಗಳನ್ನು ಜನರು ತಿಳಿದುಕೊಂಡರೆ ಮಾತ್ರ ಪಕ್ಷಕ್ಕೆ ಸಾರ್ವಜನಿಕರ ಬೆಂಬಲ ದೊರೆತು ಆ ಪಕ್ಷ ಅಧಿಕಾರಕ್ಕೆ ಬರಬಹುದು. ಆದ್ದರಿಂದ ರೈತ-ಕಾರ್ಮಿಕರ ಸಂಘಟನೆ, ಹೋರಾಟ, ರಾಜಕೀಯ ಪರಿಜ್ಞಾನ ಹಾಗೆಯೇ ಸಾರ್ವಜನಿಕರಲ್ಲಿ ಪಕ್ಷದ ನಿಲುಮೆಗಳ ಕುರಿತು ಅರಿವು ಉಂಟಾಗಬೇಕಾದರೆ ಪಕ್ಷದ ಪತ್ರಿಕೆ - ಪುಸ್ತಕಗಳು ಪ್ರತಿಯೊಂದು ಮನೆ, ಕಾರ್ಖಾನೆ ಹಳ್ಳಿ ತಲುಪಬೇಕಾಗಿದೆ. ಈ ಗುರಿ ಸಾಧನೆಗಾಗಿ ಸಿ. ಪಿ. ಐ. [ಎಂ] 12ನೆಯ ರಾಜ್ಯ ಸಮ್ಮೇಳನ ಕಾರ್ಯಕ್ರಮ ಹಾಕಿಕೊಂಡು ಪತ್ರಿಕೆ-ಸಾಹಿತ್ಯದ ಪ್ರಸಾರ ಇಮ್ಮಡಿ ಮುಮ್ಮಡಿಗೊಳಿಸಲಿ.

ಎನ್. ಕೆ. ಉಪಾಧ್ಯಾಯ

ಬೀಡಿ ಕಾರ್ಮಿಕರ ಹೋರಾಟ

ಕಾನೂನು ಜ್ಯಾರಿಯಾಗಿ 11 ವರ್ಷ ಕಳೆದರೂ ಕಾನೂನು ಪ್ರಕಾರ ಕೊಡಬೇಕಾದ ಲಾಗ್ ಪುಸ್ತಕ ಮತ್ತು ವೇಜ್ ಸ್ಲಿಪ್ ಕೊಡದೆ ಕಾರ್ಮಿಕರ ಸುಲಿಗೆ ನಡೆಯುತ್ತಿದೆ. ಇದಕ್ಕೆ ವಿರುದ್ಧ ತುಮಕೂರು ಮತ್ತು ಬೆಂಗಳೂರಿನಲ್ಲಿ ನಡೆದ ಹೋರಾಟವನ್ನು ತಾ। 8-10-1985 ರಂದು ಕುಣಿಗಲ್‌ನಲ್ಲಿ ನಡೆದ ಕರ್ನಾಟಕ ರಾಜ್ಯದ ಬೀಡಿ ವರ್ಕರ್ಸ್ ಫೆಡರೇಷನ್ [ಸಿಐಟಿಯು] ಗಮನಿಸಿ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ವೇಜ್ ಸ್ಲಿಪ್, ಲಾಗ್ ಪುಸ್ತಕ ಕೊಡಿಸುವಂತೆ ಕ್ರಮ ವಹಿಸಬೇಕೆಂದು ಅಧಿಕಾರಿಗಳನ್ನು ಒತ್ತಾಯಿಸಿತು.ಮಾತ್ರವಲ್ಲ ಇದನ್ನು ಪಡೆಯಲು ರಾಜ್ಯದ ಬೀಡಿ ಕಾರ್ಮಿಕರು ಹೋರಾಟವನ್ನು ನಡೆಸಬೇಕಾಗಿ ಕರೆ ನೀಡಿತು.

ಬೀಡಿ ಕಾರ್ಮಿಕರು ಕೇಳಿದ 20 ರಷ್ಟು ಬೋನಸ್ ಕೊಡಬೇಕೆಂದು ಮಾಲೀಕರ ಮುಂದೆ ಇಟ್ಟ ಕೇಳಿಕೆಯು ಇನ್ನೂ ಇತ್ಯರ್ಥವಾಗದಿರುವುದನ್ನು ಗಮನಿಸಿ, ರಾಜ್ಯದ ಲೇಬರ್ ಕಮೀಷನರ್ ಕೂಡಲೇ ಇತ್ಯರ್ಥಗೊಳಿಸಲು ಸಭೆ ಕರೆಯ ಬೇಕೆಂದು ಒತ್ತಾಯಿಸಿತು.

ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ. 15 ಮಜೂರಿ ಮತ್ತು ಪ್ರತಿ ಪಾಯಿಂಟಿಗೆ 5 ಪೈಸೆಯಂತೆ ತುಟ್ಟಿಭತ್ಯೆ ನಿಗದಿ ಮಾಡಿ, ಸರ್ಕಾರ ಕನಿಷ್ಟ ವೇತನ ಕೂಡಲೇ ಪ್ರಕಟಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

ಸುಪ್ರೀಮ್ ಕೋರ್ಟಿನ ತೀರ್ಮಾನವನ್ನು ಸ್ವಾಗತಿಸಿ, 1977 ಮೇ 21 ರಿಂದ ಸರ್ಕಾರದ ಪ್ರಕಟಣೆಯಂತೆ ಎಲ್ಲಾ ಬೀಡಿ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಜ್ಯಾರಿ ಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿತು.

ಮೇಲಿನ ಬೇಡಿಕೆಗಳನ್ನು ಅಕ್ಟೋಬರ್ ಅಂತ್ಯದೊಳಗೆ ಮಾಲೀಕರು ಮತ್ತು ಸಂಬಂಧಪಟ್ಟ ಸರ್ಕಾರದ ಅಧಿಕಾರಿಗಳು ಈಡೇರಿಸದಿದ್ದಲ್ಲಿ ನವೆಂಬರ್ 26 ರಿಂದ ಇಡೀ ರಾಜ್ಯದಲ್ಲಿ ಬೀಡಿ ಕಾರ್ಮಿಕರು "ಅನಿರ್ದಿಷ್ಟ ಕಾಲದ ಮುಷ್ಕರ" ಕ್ಕೆ ಸಿದ್ಧರಾಗಬೇಕೆಂದು ಕಾರ್ಮಿಕರಿಗೆ ಕರೆ ನೀಡಿತು. ಇದಕ್ಕೆ ಪೂರ್ವ ತಯಾರಿಯಾಗಿ ರಾಜ್ಯದ ಬೀಡಿ ಕಾರ್ಮಿಕರ ಪ್ರತಿನಿಧಿ ಸಮಾವೇಶವನ್ನು ತುಮಕೂರಿನಲ್ಲಿ ನವೆಂಬರ್ ತಿಂಗಳ 10 ರಂದು ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಫೆಡರೇಷನಿನ ಕಾರ್ಯ ನಿರ್ವಾಹಕ ಅಧ್ಯಕ್ಷರಾದ ಕೆ. ಮುಸಬ್ಬನವರು ವಹಿಸಿದ್ದರು. ಫೆಡರೇಶನ್‌ನಿನ ಪ್ರಧಾನ ಕಾರ್ಯದರ್ಶಿ ಮಹಮದ್ ದಸ್ತಗೀರ್‌ರವರು ವರದಿಯನ್ನು ಸಲ್ಲಿಸುತ್ತಾ ರಾಜ್ಯದ ಬೀಡಿ ಕಾರ್ಮಿಕರ ಸಂಘಟನಾ ಚಟುವಟಿಕೆಗಳನ್ನು ವಿವರಿಸಿದರು.

ಸಿ. ಪಿ. ಐ. [ಎಂ] - ಸಿ. ಪಿ. ಐ. ಭಿನ್ನಾಭಿಪ್ರಾಯಗಳು-8

ಐಕ್ಯ ಕಾರ್ಯಾಚರಣೆಗಳಲ್ಲಿ ಸಿ. ಪಿ. ಐ. (ಎಂ) - ಸಿ. ಪಿ. ಐ. ಸಹಕಾರ ಇಂದು ಅತ್ಯಗತ್ಯ

ಸಿ ಪಿ ಐ. [ಎಂ] ಮತ್ತು ಸಿ ಪಿ ಐ ನಡುವಣ ಭಿನ್ನಾಭಿಪ್ರಾಯಗಳನ್ನು ಕುರಿತಾದ ಈ ಲೇಖನ ಮಾಲೆಯಲ್ಲಿ ನಾವು ಭಾರತದ ಕಮ್ಯುನಿಸ್ಟ್ ಆಂದೋಲನದಲ್ಲಿ ಒಡಕಿನ ಪ್ರಶ್ನೆಯನ್ನು ಎರಡು ಪಕ್ಷಗಳ ನಡುವೆ ಸೈದ್ಧಾಂತಿಕ, ರಾಜಕೀಯ ಮತ್ತು ಅದೇ ರೀತಿ ಸದ್ಯದ ಕಾರ್ಯ ತಂತ್ರಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿದ್ದೇವೆ.

ನಮ್ಮ ದೃಷ್ಟಿ ಕೋನವನ್ನು ಪ್ರಸ್ತುತ ಪಡಿಸುವಾಗ ಯಾರದೇ ನಿಲುವನ್ನು ವಿಕೃತ ಗೊಳಿಸಲಾಗಿದೆ ಎಂಬ ಆಪಾದನೆಗೆ ಅವಕಾಶ ಇರಬಾರದೆಂದು ನಾವು ಸಾಧ್ಯ ವಾದಷ್ಟು ಸಂಯುಕ್ತವಾಗಿದ್ದ ಪಕ್ಷದ ಅಥವಾ ಸಿ.ಪಿ ಐ ನ ದಸ್ತಾವೇಜುಗಳಿಂದಲೇ ಉದ್ಧರಣೆಗಳನ್ನು ನೀಡಿದ್ದೇವೆ. ಈ ಲೇಖನಗಳು ಭಾರತದ ಕಮ್ಯುನಿಸ್ಟ್ ಆಂದೋಲನದಲ್ಲಿ ಒಡಕು ಉಂಟಾದುದು, ಸಿ. ಪಿ ಐ. ಆಪಾದಿಸುವಂತೆ ಚೀಣಾ ಕಮ್ಯುನಿಸ್ಟ್ ಪಕ್ಷ ಅಪ್ಪಣೆ ಕೊಡಿಸಿದರಿಂದಲೋ ಅಥವಾ ಅದು ವರ್ಗಶಾಮಿಲು ಮತ್ತು ವರ್ಗ ಹೋರಾಟದ ಎರಡು ಮಾರ್ಗಗಳ ನಡುವೆ ಪಕ್ಷದಲ್ಲಿ ನಡೆದ ಆಂತರಿಕ ಹೋರಾಟದ ಫಲವೋ ಎಂಬ ವಿವಾದವನ್ನು ಈಗ ಕೊನೆಗೊಳಿಸುತ್ತದೆ ಎಂದು ಆಶಿಸುತ್ತೇವೆ.

ಈ ಪ್ರಶ್ನೆಗೆ ವಿಭಜನೆಯ ನಂತರದ 21 ವರ್ಷಗಳ ಘಟನೆಗಳು ಉತ್ತರ ನೀಡಿವೆ. ಸಿ.ಪಿ.ಐ. [ಎಂ] ಸ್ಥಾಪಿಸಿದವರು ಸಿ.ಪಿ ಐ. ಅನುಸರಿಸುತ್ತಿರುವ ದಾರಿಯನ್ನೇ ಅನುಸರಿಸದಿದ್ದರೆ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನವನಕ್ಕೆ ಭಾರಿ ತೊಂದರೆಯಾಗುತ್ತಿತ್ತು, ಅದು ಒಂದು ನಗಣ್ಯ ರಾಜಕೀಯ ಶಕ್ತಿಯಾಗುತ್ತಿತ್ತು ಎನ್ನುವುದನ್ನು ಈ ಘಟನೆಗಳು ಸಾಬೀತು ಪಡಿಸಿವೆ.

ಕಾರ್ಯಕ್ರಮದ ತಿಳುವಳಿಕೆ ಬಗ್ಗೆ ಮಾತ್ರವಲ್ಲ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಎರಡು ಚಾರಿತ್ರಿಕ ದಸ್ತಾವೇಜುಗಳಾದ 1957ರ ಘೋಷಣೆ ಹಾಗೂ 1960ರ ಹೇಳಿಕೆಯ ಬಗ್ಗೆ ಕೂಡಾ ಎರಡು ವಿಭಿನ್ನ ತಿಳುವಳಿಕೆಗಳಿದ್ದವು ಎಂದು ವಿವರಿಸಲು ನಾವು ಪ್ರಯತ್ನಿಸಿದ್ದೇವೆ. ಅದೇ ರೀತಿ ನಮ್ಮ ಪಕ್ಷ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ಕ್ರಾಂತಿಕಾರೀ ನೀತಿಗಳನ್ನು ಹೇಗೆ ಎತ್ತಿ ಹಿಡಿದಿದೆ ಮತ್ತು ತದ್ವಿರುದ್ಧವಾಗಿ ಬೂರ್ಜ್ವಾ-ರಾಷ್ಟ್ರೀಯವಾದೀ ಪ್ರಭಾವ ಸಿ.ಪಿ ಐ.ನ್ನು ಹೇಗೆ ತೋರೆಯುತ್ತಿದೆ ಎಂದು ವಿವರಿಸಲು ಕೂಡಾ ಪ್ರಯತ್ನಿಸಿದ್ದೇವೆ.

ರಾಜಶೇಖರ ರೆಡ್ಡಿಯವರು ಭಟಿಂಡಾ ಅಧಿವೇಶನದ ದಸ್ತಾವೇಜುಗಳಲ್ಲಿ ರೂಪಿಸಿದಂತೆ ಎರಡು ಪಕ್ಷಗಳ ಐಕ್ಯತೆಯ ದೃಷ್ಟಿಕೋನವನ್ನು ಮುಂದಿಟ್ಟಿದ್ದಾರೆ. ಈ ಲೇಖನ ಮಾಲೆಯ ಈ ಅಂತಿಮ ಲೇಖನದಲ್ಲಿ ಈ ಪ್ರಶ್ನೆಯನ್ನು ಮತ್ತು ಬೂರ್ಜ್ವಾ ಭೂಮಾಲೀಕ ವರ್ಗ ಆಳ್ವಿಕೆಗೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ರಂಗ ಕಟ್ಟುವಲ್ಲಿ ಈ ಎರಡು ಪಕ್ಷಗಳ ಐಕ್ಯತೆಯ ಪ್ರಶ್ನೆಯನ್ನು ಪರಿಶೀಲಿಸಬಯಸುತ್ತೇವೆ.

ಮೊದಲು ನಮ್ಮೆರಡು ಪಕ್ಷಗಳ ಐಕ್ಯತೆಯ ಪ್ರಶ್ನೆಗಳನ್ನು ಎತ್ತಿಕೊಳ್ಳೋಣ. ಇಂತಹ ಐಕ್ಯತೆಯನ್ನು ಬೆಸೆಯುವುದು ಮಾರ್ಕ್ಸ್‌ವಾದ ಲೆನಿನ್‌ವಾದದ ಆಧಾರದ ಮೇಲೆ ಮಾತ್ರ ಸಾಧ್ಯ ಎನ್ನುವುದು ಕಮ್ಯುನಿಸ್ಟ್ ಆಂದೋಲನದ ಬಗ್ಗೆ ತಿಳಿದಿರುವ ಯಾರಿಗೂ ಗೊತ್ತಿಲ್ಲದಿರುವುದು ಸಾಧ್ಯವಿಲ್ಲ. ಐಕ್ಯತೆ ಶಾಶ್ವತವಾಗಬೇಕಾದರೆ ಅದು ಒಂದು ನೀತಿ ಬದ್ಧ ಐಕ್ಯತೆಯಾಗಬೇಕು. ಸಿ.ಪಿ.ಐ.ನ ಭಟಿಂಡಾ ಅಧಿವೇಶನದ ದಸ್ತಾವೇಜುಗಳು ಕೂಡಾ ಇದನ್ನೆ ಹೇಳಿವೆ. ಆದರೆ ದುರದೃಷ್ಟವಶಾತ್ 1956ರಿಂದೀಚೆಗೆ ಸಿ-ಪಿ.ಐ. ನಲ್ಲಿರುವವರು ಹಾಗೂ ಸಿ ಪಿ ಐ. [ಎಂ] ನಲ್ಲಿರುವ ನಮ್ಮ ನಡುವೆ ಪಕ್ಷದ ಕಾರ್ಯಕ್ರಮದ ಕೆಲವು ಮೂಲಭೂತ ಪ್ರಶ್ನೆಗಳಿಗೆಸಂಬಂಧಪಟ್ಟಂತೆ ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಭಾರತೀಯ ಸನ್ನಿವೇಶದಲ್ಲಿ ಮೂರ್ತ ರೂಪವಾಗಿ ಅನ್ವಯಿಸುವ ಬಗ್ಗೆ ಒಂದು ದೊಡ್ಡ ಕಂದಕ ಏರ್ಪಟ್ಟಿದೆ. ಪ್ರಭುತ್ವದ ಮತ್ತು ಸರಕಾರದ ವರ್ಗ ಚಾರಿತ್ರ್ಯ, ಸದ್ಯದ ಘಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಕ್ರಾಂತಿಯ ಕರ್ತವ್ಯಗಳನ್ನು ಪೂರ್ಣಗೊಳಿಸುವಲ್ಲಿ ಕಾರ್ಮಿಕ ವರ್ಗದ ಮುಖಂಡತ್ವದ ಪಾತ್ರ, ರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿಯೇತರ ಮಾರ್ಗ ಎಂಬ ಪರಿಕಲ್ಪನೆಗಳು ಇವೇ ಆ ಮೂಲಭೂತ ಪ್ರಶ್ನೆಗಳು.

ತಡವರಿಸುತ್ತಿದ್ದಾರೇಕೆ ?

ಸಿ ಪಿ ಐ.ನ ತಿಳುವಳಿಕೆ ಮೂರ್ತ ಪರಿಸ್ಥಿತಿಯ ಮೂರ್ತ ಅಧ್ಯಯನದ ಮೇಲೆ ಆಧಾರಿತವಾಗಿಲ್ಲ: ಬದಲಿಗೆ, ರಾಷ್ಟ್ರೀಯ ಪ್ರಜಾಪ್ರಭುತ್ವದ ಘೋಷಣೆಯ ಸುತ್ತ ಚಲಿಸುವ ಒಂದು ವ್ಯಕ್ತಿನಿಷ್ಟ ತಿಳುವಳಿಕೆ ಮಾತ್ರ ಆಗಿದೆ. ಒಮ್ಮೆ ರಾಷ್ಟ್ರೀಯ ಪ್ರಜಾಪ್ರಭುತ್ವವನ್ನು ತಮ್ಮ ಗುರಿಯೆಂದು ಮಾಡಿಕೊಂಡ ಮೇಲೆ ಬೂರ್ಜ್ವಾ ವರ್ಗದಲ್ಲಿ ಒಡಕನ್ನು ಕಾಣಲು, ತಾವು ಯಾರೊಂದಿಗೆ ಸಹಕರಿಸಬಯಸುತ್ತಾರೋ ಆ ಗುತ್ತೆದಾರಿಯೇತರ ಪ್ರಜಾಪ್ರಭುತ್ವದ ವಿಭಾಗ ಮುಖಂಡತ್ವ ವಹಿಸಿ ವರ್ಗ ಶಕ್ತಿಗಳ ಸಹ ಸಂಬಂಧಗಳಲ್ಲಿ ಒಂದು ಪರಿವರ್ತನೆ ತಂದು, ಕಾರ್ಮಿಕ ವರ್ಗ ಮುಖಂಡತ್ವವನ್ನು ಅಪೇಕ್ಷಿಸದೇನೇ ರಾಷ್ಟ್ರೀಯ ಪ್ರಜಾಪ್ರಭುತ್ವದ ಗುರಿ ತಲುಪಲು ಸಾಧ್ಯವೆಂದು ಕಾಣಲು ಅವರು ಬಯಸುತ್ತಾರೆ.

ಪ್ರಭುತ್ವದ ವರ್ಗ ಚಾರಿತ್ರ್ಯದ ಪ್ರಶ್ನೆಯನ್ನೇ ತಗೊಳ್ಳಿ. ಈಗಾಗಲೇ ಹೇಳಿರುವಂತೆ ಪ್ರಭುತ್ವ ಬೂರ್ಜ್ವಾ-ಭೂಮಾಲಕ ವರ್ಗಗಳದ್ದಾಗಿದ್ದು ಹಿರಿ ಬೂರ್ಜ್ವಾ ವರ್ಗದ ಮುಖಂಡತ್ವದಲ್ಲಿದೆ. ಎಂದು ನಮ್ಮ ಕಾರ್ಯಕ್ರಮದಲ್ಲಿ ಖಡಾ ಖಂಡಿತವಾಗಿ ಹೇಳಿದ್ದೇವೆ. ಭೂ ಸುಧಾರಣೆಗಳು, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಹ್ವಾನ, ಗುತ್ತೇದಾರಿಯ ಬೆಳವಣಿಗೆ, ಜಾಗತಿಕ ಬ್ಯಾಂಕ್ ಮತ್ತು ಐ.ಎಮ್.ಎಫ್. ಜತೆ ಸಂಬಂಧ ಜೋಡಣೆ ಮತ್ತು ಕಮ್ಯುನಿಸ್ಟ್-ವಿರೋಧಕ್ಕೆ ಸಂಬಂಧಪಟ್ಟಂತೆ ಸರಕಾರದ ಎಲ್ಲಾ ಧೋರಣೆಗಳನ್ನೂ ಈ ರೀತಿಯ ಚಾರಿತ್ರ್ಯ ವಿಶ್ಲೇಷಣೆಯ ಮೂಲಕ ವಿವರಿಸಲು ನಮಗೆ ಸಾಧ್ಯವಾಗಿದೆ ಆದರೆ ಸಿ.ಪಿ ಐ ನ ಮುಖಂಡರಿಗೆ ತಮ್ಮ ಕಾರ್ಯಕ್ರಮದ ಪ್ರಭುತ್ವ ಮತ್ತು ಸರಕಾರದ ಚಾರಿತ್ರ್ಯಕ್ಕೆ ಸಂಬಂಧಪಟ್ಟ ತಿಳುವಳಿಕೆಯ ಮೂಲಕ ಕಾಂಗ್ರೆಸ್ (ಐ) ಸರಕಾರದ ಧೋರಣೆಗಳನ್ನು ವಿವರಿಸಲು ಸಾಧ್ಯವೇನು ?

ಇಂತಹ ಯಾವುದೇ ವಿವರಣೆ ನೀಡುವುದಂತೂ ದೂರವುಳಿಯಿತು, ಈ ಪ್ರಶ್ನೆಗಳ ಮೇಲೆ ಅವರು ಹಲವು ಬಾರಿ ಏಕೆ ತಡವರಿಸಬೇಕಾಗಿ ಬಂತು ಎಂಬುದನ್ನು ಪರೀಕ್ಷಿಸಲು ಕೂಡಾ ಪ್ರಯತ್ನಿಸಿಲ್ಲ. ಒಂದು ಘಟ್ಟದಲ್ಲಿ ಅವರು ಭೂ ಮಾಲಕರು ಪ್ರಭುತ್ವದ ಮೇಲೆ ರಾಜ್ಯಮಟ್ಟದಲ್ಲಿ ಭಾರೀ ಪ್ರಭಾವ ಬೀರುತ್ತಾರೆ ಎಂದಿದ್ದರು. ಇನ್ನೊಮ್ಮೆ ಕೇಂದ್ರ ಸರಕಾರದ ಧೋರಣೆಗಳ ಮೇಲೆ ಹಿರಿ ಬೂರ್ಜ್ವಾ ವರ್ಗ ವಿಪರೀತ ಪ್ರಭಾವ ಬೀರುತ್ತದೆ ಎಂದರು. ಆದರೆ ಭೂಮಾಲಕರು ಬೂರ್ಜ್ವಾ ವರ್ಗದ ಮಿತ್ರರು, ಅವರೊಂದಿಗೆ ಅಧಿಕಾರ ಹಂಚಿಕೊಳ್ಳುತ್ತಿದ್ದಾರೆ ಹಾಗೂ ಹಿರಿಬೂರ್ಜ್ವಾವರ್ಗ ಪ್ರಭುತ್ವದ ಮುಖಂಡತ್ವ ವಹಿಸುತ್ತಿದೆ ಎನ್ನುವುದನ್ನು ಅವರು ಎಂದೂ ಒಪ್ಪಿಕೊಂಡಿಲ್ಲ. ಅದಕ್ಕೆ ಬದಲಾಗಿ ಭಾರತದ ಕಮ್ಯುನಿಸ್ಟ್ ಆಂದೋಲನದಲ್ಲಿ ಒಡಕು ಉಂಟಾದ ಮೇಲೆ ಕನಿಷ್ಟ ನಾಲ್ಕು ಬಾರಿಯಾದರೂ ಅವರು ಬೂರ್ಜ್ವಾ ವರ್ಗದಲ್ಲಿ ಒಡಕುಗಳು ಉಂಟಾಗಿವೆ, ಸಾಮ್ರಾಜ್ಯಶಾಹೀ- ಪರ ಗುತ್ತೇದಾರಿ ವಿಭಾಗಗಳು ಒಡೆದು ದೂರ ಹೋಗಿವೆ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮಿತ್ರಕೂಟದ ಭಾಗವಾದ ರಾಷ್ಟ್ರೀಯ ಬೂರ್ಜ್ವಾ ವರ್ಗ ಪ್ರಭುತ್ವಾಧಿಕಾರ ಹಿಡಿದುಕೊಂಡಿದೆ ಎಂದು ಹೇಳಿದ್ದಾರೆ. ಈ ತಿಳುವಳಿಕೆಯ ಆಧಾರದ ಮೇಲೆ ಬೂರ್ಜ್ವಾವರ್ಗದ ಹಿಂದೆ ಬಂದಾಗುವ ಸದ್ಯದ ಕಾರ್ಯತಂತ್ರಗಳನ್ನು ಅವರು ರೂಪಿಸಿಕೊಂಡಿದ್ದಾರೆ.

"ಸೂಕ್ಷ್ಮ" ವ್ಯತ್ಯಾಸವೇನಲ್ಲ

ಆಗಸ್ಟ್ 18 ರ "ನ್ಯೂ ಏಜ್"ನಲ್ಲಿ ಪ್ರಕಟವಾದ ಲೇಖನದಲ್ಲಿ ಸಿ. ರಾಜೇಶ್ವರರಾವ್ ತನ್ನ ನಿಲುವನ್ನು ನಮ್ಮ ಕಾರ್ಯಕ್ರಮದೊಂದಿಗೆ ಸರಿಹೊಂದಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆ ಲೇಖನದಲ್ಲಿ ಅವರು ಹೀಗನ್ನುತ್ತಾರೆ—" ಪ್ರಭುತ್ವ ಸಮಸ್ತ ಬೂರ್ಜ್ವಾವರ್ಗದ್ದಾಗಿದ್ದು ಅದರ ಮೇಲೆ ಹಿರಿ ಬೂರ್ಜ್ವಾ ವರ್ಗ ಬಲವಾದ ಪ್ರಭಾವ ಹೊಂದಿದೆ ಹಾಗೂ ಭೂಮಾಲಕರೊಂದಿಗೆ ಜೋರಾಗಿ ಕೈಮಿಲಾಯಿಸಿದೆ ಎಂದು ನಮ್ಮ ಕಾರ್ಯಕ್ರಮ ಹೇಳಿದರೆ ಪ್ರಭುತ್ವ ಹಿರಿ ಬೂರ್ಜ್ವಾ ವರ್ಗದ ಮುಖಂಡತ್ವದಲ್ಲಿರುವ ಬೂರ್ಜ್ವಾ ಹಾಗೂ ಭೂಮಾಲಕ ವರ್ಗಗಳ ಪ್ರಭುತ್ವ ಎಂದು ಸಿ ಪಿ.ಐ. (ಎಂ) ಕಾರ್ಯಕ್ರಮ ಹೇಳುತ್ತದೆ.

"ಪ್ರತಿಯೊಂದು ಪ್ರಭುತ್ವವೂ ಮುಖ್ಯವಾಗಿ ಒಂದು ವರ್ಗದ ಪ್ರಭುತ್ವ ಎಂಬುದು ನಮ್ಮ ಭಾವನೆ. ಅದಕ್ಕೆ ಮಿತ್ರ ವರ್ಗಗಳಿರಬಹುದು. ನಮ್ಮ ಸಂದರ್ಭದಲ್ಲಿ ಇದು ಸಮಸ್ತ ಬೂರ್ಜ್ವಾ ವರ್ಗದ ಪ್ರಭುತ್ವ, ಭೂಮಾಲಕರು ಅವರ ಮಿತ್ರರು "

ಮುಂದುವರಿದು "ಪ್ರಭುತ್ವದ ಬಗ್ಗೆ ನಮ್ಮ ಚಾರಿತ್ರ್ಯ ವಿಶ್ಲೇಷಣೆಯಲ್ಲಿ ಹಿರಿಬೂರ್ಜ್ವಾವರ್ಗ ಪ್ರಭುತ್ವದ ಮೇಲೆ ಬಲವಾದ ಪ್ರಭುತ್ವ ಹೊಂದಿರುವುದಾದರೂ ಅದು ಸಂಪೂರ್ಣ ಮುಖಂಡತ್ವದಲ್ಲಿ ಇಲ್ಲ" [ಒತ್ತು ಸೇರಿಸಿದ್ದು]ಎಂದು ಹೇಳಿದ ಮೇಲೆ ಅದಕ್ಕೆ ಕಾರಣವನ್ನು ಅವರು ವಿವರಿಸುತ್ತಾರೆ. ಹಿರಿಬೂರ್ಜ್ವಾ ವರ್ಗದ ಮುಖಂಡತ್ವವನ್ನು ಒಪ್ಪಿಕೊಂಡರೆ ದೇಶದ ಪ್ರಗತಿಶೀಲ ವಿದೇಶೀ ಧೋರಣೆಯನ್ನು ವಿವರಿಸುವುದು ಅವರಿಗೆ ಕಷ್ಟವಾಗುತ್ತದಂತೆ ಆದರೆ ಇದನ್ನು ನಮ್ಮ ಕಾರ್ಯದಲ್ಲಿ ವಿವರಿಸುವಾಗ ನಮಗೇನೂ ಕಷ್ಟವಾಗಲಿಲ್ಲ. ಪ್ರಭುತ್ವದ ಬಗ್ಗೆ ವಿಶ್ಲೇಷಣೆಯಲ್ಲಿನ ಈ ವ್ಯತ್ಯಾಸ ತುಂಬಾ ಸೂಕ್ಷ್ಮ ಎಂದು ಕೂಡಾ ಅವರೇ ಹೇಳುತ್ತಾರೆ.

ಭೂಮಾಲಕರು ಪ್ರಭುತ್ವದಲ್ಲಿ ಒಂದು ಮಿತ್ರವರ್ಗ ಎಂದು ಅವರು ತಮ್ಮ ಲೇಖನದಲ್ಲಿ ಒಪ್ಪುತ್ತಾರೆ. ಆದರೆ ಪ್ರಭುತ್ವದ ಮೇಲೆ ಹಿರಿ ಬೂರ್ಜ್ವಾ ವರ್ಗದ ಮುಖಂಡತ್ವ ಪೂರ್ಣವಾಗಿಲ್ಲ ಎನ್ನುತ್ತಾರೆ ಅವರು. ಅದೇ ರೀತಿ ದ್ವಂದ್ವ ಮುಖಂಡತ್ವದ ಪ್ರಶ್ನೆಯ ಮೇಲೂ ಅದೆಷ್ಟೇ ಉದ್ದುದ್ದ ವಾದಗಳನ್ನು ಒಡ್ಡಿದರೂ ಭಾರತದ ಸಂದರ್ಭದಲ್ಲಿ ಒಂದು ವರ್ಗ ಮುಖಂಡತ್ವವಿಲ್ಲದೆ ಪ್ರಭುತ್ವ ಇರಲು ಸಾಧ್ಯವೇ, ಆ ವರ್ಗ ಬೂರ್ಜ್ವಾವರ್ಗವೇ ಅಥವಾ ಕಾರ್ಮಿಕ ವರ್ಗವೇ ಎಂದು ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದ ಮೇಲೆ ವಿವರಿಸಲು ಅವರು ಅಸಮರ್ಥರಾಗಿದ್ದಾರೆ. ರಾಜೇಶ್ವರರಾವ್ ಸೂಚಿಸ ಬಯಸುವಂತೆ ಇದು "ಸೂಕ್ಷ್ಮ" ವ್ಯತ್ಯಾಸವೇನಲ್ಲ. ಈ ವ್ಯತ್ಯಾಸ ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಒಡಕುಂಟಾದ ಮೇಲೆ ನಡೆಯುತ್ತಿರುವ ಘಟನೆಗಳ ಮೇಲೆ ತೀವ್ರ ಪರಿಣಾಮ ಬೀರಿದೆ.

ಐಕ್ಯತೆಗೆ ಒಂದೇ ದಾರಿ

ಕಮ್ಯುನಿಸ್ಟ್ ಆಂದೋಲನದ ಹಿತೈಷಿಗಳು ಹಲವರು ಕೂಡಾ ಬೂರ್ಜ್ವಾ ಪಕ್ಷಗಳು ಅಸ್ತವ್ಯಸ್ತಗೊಂಡಿರುವ ಹಿನ್ನೆಲೆಯಲ್ಲಿ ಬೂರ್ಜ್ವಾ ಭೂಮಾಲಕ ಆಳ್ವಿಕೆಗೆ ಬಂದು ಎಡ-ಪ್ರಜಾಪ್ರಭುತ್ವ

ಹರಿಕಿಶನ್‌ಸಿಂಗ್ ಸುರ್ಜಿತ್

ಪರ್ಯಾಯ ಮೂಡಿ ಬರುವುದನ್ನು ಕಾಣುವ ಆತುರದಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಏಕ್ಯದೆ ಬರಬೇಕೆಂಬು ಬಯಕೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅವರೆ ಈ ಪ್ರಶ್ನೆಯನ್ನು ಎತ್ತುವ ಮೊದಲು ಈ ಕೆಳಗಿನ ಪ್ರಶ್ನೆಗಳಿಗೆ ದೃಢ ಉತ್ತರಗಳನ್ನು ಕೊಡಬೇಕಾಗಿದೆ.

1) ಭಾರತದಲ್ಲಿ ಭೂಮಾಲಕರು ಒಂದು ವರ್ಗವಾಗಿ ಬೂರ್ಜ್ವಾ ವರ್ಗದೊಡನೆ ಅಧಿಕಾರ ಹಂಚಿಕೊಂಡಿಲ್ಲವೇ? ಪರಿಣಾಮವಾಗಿ ಪ್ರಭುತ್ವಾಧಿಕಾರವನ್ನು ಬೂರ್ಜ್ವಾ – ಭೂ ಮಾಲಕ ವರ್ಗಗಳು ಹಂಚಿಕೊಂಡಿವೆಯೋ ಅಥವಾ ಇಲ್ಲವೇ ?

2) ಹಿರಿಬೂರ್ಜ್ವಾವರ್ಗ ಪ್ರಭುತ್ವದ ಮುಖಂಡತ್ವ ವಹಿಸಿದೆಯೋ ಅಥವಾ ಇಲ್ಲವೇ ? ಯಾಕೆಂದರೆ ಪ್ರಬಲ ವಿಭಾಗ ಪ್ರಭುತ್ವದ ಮುಖಂಡತ್ವ ವಹಿಸುತ್ತದೆಯೆಂಬುದು ಪ್ರಭುತ್ವದ ಬಗ್ಗೆ ಮಾರ್ಕ್ಸ್‌ವಾದೀ–ಲೆನಿನ್‌ವಾದೀ ತಿಳುವಳಿಕೆಯ ಆಧಾರ.

3) ಭಾರತದಂತಹ ಬಂಡವಾಳಶಾಹಿ ಬೇರೆಡೆಗೆ ಹೋಲಿಸಿದರೆ ಕುಮಾರಾಗಿ ಬೆಳೆದಿರುವ, ಸ್ವಾತಂತ್ರ್ಯಾನಂತರದ 38 ವರ್ಷಗಳಲ್ಲಿ ಗುತ್ತೇದಾರಿಗಳು ಬೆಳೆದಿರುವ, ಅಧಿಕಾರದ ಹಸ್ತಾಂತರಣದ ಕಾಲದಲ್ಲಿ ಬ್ರಿಟಿಶರಿಂದ ಸುಸಜ್ಜಿತ ಪ್ರಭುತ್ವಯಂತ್ರಕ್ಕೆ ಬೂರ್ಜ್ವಾ ವರ್ಗ ವಾರಸುದಾರರಾದದ್ದು ಮಾತ್ರವಲ್ಲ ಅದನ್ನು ಹಲವು ಪಟ್ಟು ಬಲಗೊಳಿಸಿರುವ ಒಂದು ದೇಶದಲ್ಲಿ ಇಂತಹ ಬೂರ್ಜ್ವಾವರ್ಗ ಕಾರ್ಮಿಕ ವರ್ಗದೊಡನೆ ಅಧಿಕಾರ ಹಂಚಿಕೊಳ್ಳಲು ಸಿದ್ಧವಾಗುತ್ತದೆಯೇ ?

4) ಪರಿಣಾಮವಾಗಿ, ಕಾರ್ಮಿಕ ವರ್ಗ ಪ್ರಭುತ್ವದ ಮುಖಂಡತ್ವ ವಹಿಸಬೇಕೆಂಬ ವಿಚಾರವಿಲ್ಲದೆ ಒಂದು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗವನ್ನು ರಚಿಸುವ ಸಾಧ್ಯತೆಯೇನಾದರೂ ಇದೆಯೇ ? ಕಾರ್ಮಿಕ ವರ್ಗ ಮುಖಂಡತ್ವದ ಪಾತ್ರವಹಿಸದೆ ಪ್ರಜಾಪ್ರಭುತ್ವ ಕ್ರಾಂತಿಯ ಗುರಿಗಳನ್ನು ಪೂರ್ಣಗೊಳಿಸಲು ಸಾಧ್ಯವೇ ?

ಈ ಪ್ರಶ್ನೆಗಳಿಗೆ ದೃಢವಾದ ಉತ್ತರಗಳು ದೊರೆತು ಈ ಬಗ್ಗೆ ಒಂದು ಸರ್ವಸಾಮಾನ್ಯ ತಿಳುವಳಿಕೆ ಬಂದರೆ ಮಾತ್ರ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನದ ಐಕ್ಯತೆಗೆ ಅನುಕೂಲವಾದ ಸನ್ನಿವೇಶ ಸೃಷ್ಟಿಗೊಳ್ಳುವುದು ಸಾಧ್ಯ. ಇದಲ್ಲದೆ ಬೇರೆ ಯಾವುದೇ ದಾರಿ ಕಮ್ಯುನಿಸ್ಟ್ ಆಂದೋಲನಕ್ಕೆ ಮಾತ್ರವೇ ಅಲ್ಲ ಪ್ರಜಾಪ್ರಭುತ್ವ ಆಂದೋಲನಕ್ಕೂ ಹಾನಿಕಾರಕವಾಗುತ್ತದೆ.

ಅದೇ ರೀತಿ ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯ ಪ್ರಶ್ನೆಯ ಮೇಲೆ ನಾವು ಸದಾ ರಾಷ್ಟ್ರೀಯ ಸಂಕುಚಿತತೆಯ ವಿರುದ್ಧ ಹಾಗೂ ಸಮಾಜವಾದೀ ವ್ಯವಸ್ಥೆ, ಜಾಗತಿಕ ಕಾರ್ಮಿಕ ವರ್ಗ ಮತ್ತು ರಾಷ್ಟ್ರೀಯ ವಿಮೋಚನಾ ಶಕ್ತಿಗಳನ್ನು ಬೆಂಬಲಿಸುವ ನಿಲುವು ತಳೆದಿದ್ದೇವೆ. ಕ್ರಾಂತಿಯನ್ನು ರಫ್ತು ಮಾಡುವುದಕ್ಕೆ ನಾವು ವಿರುದ್ಧವಾಗಿದ್ದು, ಒಂದು ದೇಶದಲ್ಲಿ ಕ್ರಾಂತಿ ಆ ದೇಶದಲ್ಲಿ ವರ್ಗ ಹೋರಾಟದ ಅಂತಿಮ ಫಲ ಎಂದು ನಂಬಿದ್ದೇವೆ. ಹಾಗೇನೇ ಪ್ರತಿಕ್ರಾಂತಿಯನ್ನು ರಫ್ತು ಮಾಡುವುದನ್ನು ನಾವು ವಿರೋಧಿಸುತ್ತೇವೆ. ಸಾಮ್ರಾಜ್ಯಶಾಹೀ ಕುತಂತ್ರಗಳಿಂದ ಕ್ರಾಂತಿಯನ್ನು ರಕ್ಷಿಸಿಕೊಳ್ಳುವ ಎಲ್ಲಾ ವಿಧಾನಗಳನ್ನು, ಕ್ರಮಗಳನ್ನು ನಾವು ಬೆಂಬಲಿಸುತ್ತೇವೆ. ಇದೇ ಹಂಗೇರಿಯ ಘಟನೆಗಳು, ಜೆಕೋಸ್ಲೋವಾಕಿಯಾ ಹಾಗೂ ಅಫಘಾನಿಸ್ತಾನದ ಬೆಳವಣಿಗೆಗಳ ಬಗ್ಗೆ ನಮ್ಮ ನಿಲುವುಗಳಿಗೆ ನಮಗೆ ಮಾರ್ಗದರ್ಶನ ನೀಡಿತು. ಕ್ರಾಂತಿಗಳ ರಕ್ಷಣೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು ಎಂದೂ ಬೂರ್ಜ್ವಾ ರಾಷ್ಟ್ರೀಯವಾದೀ ಪ್ರಚಾರದಿಂದ ಪ್ರಭಾವಿತಗೊಳ್ಳಲಿಲ್ಲ. ಅಥವಾ ಯಾವುದೇ ಪರಿಷ್ಕರಣವಾದೀ ವಿಚಾರಗಳನ್ನು ಇಡಿಯಾಗಿ ನುಂಗಲಿಲ್ಲ. ಈ ವಿಷಯದಲ್ಲಿ ತನ್ನ ನಿಲುವುಗಳ ಬಗ್ಗೆ ಸಿ ಪಿ ಐ. ಹಿಂದಿರುಗಿ ನೋಡುವುದು ಸಾಧ್ಯ.

ಪರ್ಯಾಯದ ತಿಳುವಳಿಕೆ

ಸದ್ಯದ ಕಾರ್ಯತಂತ್ರಗಳ ಪ್ರಶ್ನೆಯಲ್ಲಿ, ಜನ ಸಮೂಹಗಳಲ್ಲಿರುವ ಪ್ರಮುಖ ವಿಭಜನೆಯೆಂದರೆ ಕಾಂಗ್ರೆಸ್‌ನ್ನು ಅನುಸರಿಸುವ ಮತ್ತು ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳನ್ನು ಅನುಸರಿಸುವ ಜನಸಮೂಹಗಳ ನಡುವಿನ ವಿಭಜನೆ ಎಂದು ಸಿ.ಪಿ ಐ. ಬಹಳ ಹಿಂದೇನೇ ನಿರೂಪಿಸಿತ್ತು. ಆ ನಿರೂಪಣೆಯಿಂದಾಗಿಯೇ ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಐಕ್ಯತೆಯ ಬಗ್ಗೆ ಅವರ ತಿಳುವಳಿಕೆ ಅವರನ್ನು ಸಿ ಪಿ ಐ. ಮತ್ತು ಕಾಂಗ್ರೆಸ್ಸಿನ ಐಕ್ಯತೆಯ ಘೋಷಣೆಯತ್ತ ಕೆಲವೊಮ್ಮೆ ಕೊಂಡೊಯ್ಯಿತು. ಸಿ.ಪಿ ಐ. [ಎಂ] –ವಿರೋಧೀ ರಂಗಗಳನ್ನು ರಚಿಸಿಕೊಳ್ಳುವ ಮಟ್ಟದವರೆಗೆ ಇದನ್ನು ಎಳೆದೊಯ್ಯಲಾಗಿತ್ತು.

ಇದಕ್ಕೆ ಭಿನ್ನವಾಗಿ, ಸಮಸ್ತ ದೇಶವನ್ನು ಪರಿಗಣಿಸಿದರೆ ಎಡ ಪಂಥೀಯರ ಪ್ರಭಾವ ದುರ್ಬಲವಾಗಿದೆ ಮತ್ತು ಜನಸಮೂಹಗಳ ನಡುವಿನ ಪ್ರಮುಖ ವಿಭಜನೆಯೆಂದರೆ ಒಂದೆಡೆ ಕಾಂಗ್ರೆಸ್(ಐ)ನ್ನು ಅನುಸರಿಸುವ, ಇನ್ನೊಂದೆಡೆ. ಇತರ ಬೂರ್ಜ್ವಾ–ಭೂಮಾಲಕ ಪಕ್ಷಗಳನ್ನು ಅನುಸರಿಸುವ ಜನ ಸಮೂಹಗಳ ನಡುವಿನ ವಿಭಜನೆ, ಜನಸಮೂಹಗಳನ್ನು ಬೂರ್ಜ್ವಾ–ಭೂಮಾಲಕ ಪಕ್ಷಗಳ ಪ್ರಭಾವದಿಂದ ಹೊರಸೆಳೆದು ಎಡ ಮತ್ತು ಪ್ರಜಾಪ್ರಭುತ್ವವಾದೀ ಕಾರ್ಯಕ್ರಮದ ಹಿಂದೆ ಸಂಘಟಿಸುವುದು ಎಡ ಪಂಥೀಯರ ಕರ್ತವ್ಯ ಎಂಬುದು ನಮ್ಮ ತಿಳುವಳಿಕೆಯಾಗಿದೆ.

"ಈ ರಂಗ ಕಟ್ಟುವ ಹೋರಾಟ ವರ್ಗ ಶಕ್ತಿಗಳ ಸಹ ಸಂಬಂಧದಲ್ಲಿ ಒಂದು ಬದಲಾವಣೆ ತರುವ, ಜನತೆ ಎರಡು ಬೂರ್ಜ್ವಾ–ಭೂಮಾಲಕ ಪಕ್ಷಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿರುವ ಮತ್ತು ಸದ್ಯದ ವ್ಯವಸ್ಥೆಯಲ್ಲಿ ಬಂಧಿತಗೊಳ್ಳುವ ಪರಿಸ್ಥಿತಿಯನ್ನು ಕೊನೆಗೊಳಿಸುವ ನಮ್ಮ ಪ್ರಯತ್ನದ ಒಂದು ಭಾಗ" ಎಂದು ನಮ್ಮ ಪಕ್ಷದ ಜಲಂಧರ್ ಅಧಿವೇಶನದ ನಿರ್ಣಯ ಹೇಳಿದೆ.

ಇಂತಹದೊಂದು ರಂಗವನ್ನು, ಹೋರಾಟದ ಮೂಲಕ ಕಟ್ಟಬೇಕೆನ್ನುತ್ತೇವೆ ನಾವು. ಇದರಲ್ಲಿ ಕಾರ್ಮಿಕ ವರ್ಗ, ರೈತಾಪಿ ಜನಗಳು, ನೌಕರರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಮುಂತಾದ ಜನ ವಿಭಾಗಗಳ ಐಕ್ಯ ಕಾರ್ಯಾಚರಣೆಗಳು ಬಹಳ ಮಹತ್ತ್ವಪೂರ್ಣವಾಗಿವೆ

ಸುಮಾರಾಗಿ ಇದೇ ನಿಲುವನ್ನು ರಾಜಶೇಖರ ರೆಡ್ಡಿಯವರು ಕೂಡಾ ಆಗಸ್ಟ್ 4 ರ ತನ್ನ ಲೇಖನದಲ್ಲಿ "ಎಡ ಮತ್ತು ಪ್ರಜಾಪ್ರಭುತ್ವವಾದೀ ಪರ್ಯಾಯ ಇಲ್ಲದಿದ್ದರೆ ಕಾಂಗ್ರೆಸ್(ಐ) ಭಾರತದ ರಾಜಕೀಯ ರಂಗದಲ್ಲಿ ಪ್ರಾಬಲ್ಯ ಮೆರೆಸುತ್ತಲೇ ಇರುತ್ತದೆ ಅಥವಾ ಅದೇ ಬಂಡವಾಳಶಾಹೀ ಮಾರ್ಗವನ್ನು ಕೆಲವು ಅಲ್ಪ ವ್ಯತ್ಯಾಸಗಳೊಂದಿಗಷ್ಟೇ ಅನುಸರಿಸುವ ಇತರ ಪಕ್ಷಗಳು ಅದರ ಸ್ಥಾನ ಪಡೆಯುತ್ತವೆ" ಎಂದು ಹೇಳಿರುವುದು ಒಂದು ಸ್ವಾಗತಾರ್ಹ ಸೂಚನೆ.

ಈ ತಿಳುವಳಿಕೆಯನ್ನೇ ಮುಂದೆ ಕೊಂಡೊಯ್ದು ಸದ್ಯದ ಧೋರಣೆಯನ್ನು ರೂಪಿಸುವಂತಾದರೆ ಅದು ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಐಕ್ಯತೆಯನ್ನು ಕಟ್ಟುವಲ್ಲಿ ಎರಡು ಪಕ್ಷಗಳು ಹತ್ತಿರ ಬರಲು ಖಂಡಿತವಾಗಿ ನೆರವಾಗುತ್ತದೆ.

ಇತರ ಪಕ್ಷಗಳೊಂದಿಗೆ ಸಹಕಾರ

ಸದ್ಯದ ಕಾರ್ಯತಂತ್ರಗಳ ಬಗ್ಗೆ ಭಿನ್ನ ದೃಷ್ಟಿಕೋನಗಳಿರುವ ಇನ್ನೊಂದು ಅಂಶವೆಂದರೆ ಇತರ ಬೂರ್ಜ್ವಾ–ಭೂಮಾಲಕ ವಿರೋಧ ಪಕ್ಷಗಳನ್ನು ಕುರಿತು ಯಾವ ರೀತಿಯ ನಿಲುವು ತಳೆಯಬೇಕೆನ್ನುವ ಪ್ರಶ್ನೆ. ಈ ಪಕ್ಷಗಳೊಂದಿಗಿನ ಸಹಕಾರ ಎಡ ಮತ್ತು ಪ್ರಜಾಪ್ರಭುತ್ವ ರಂಗಕ್ಕೆ ಒಂದು ಪರ್ಯಾಯ ಕ್ರಮವಾಗಬಹುದೆಂಬ ಯಾವ ಭ್ರಮೆಯನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಆದರೆ ಸರ್ವಾಧಿಕಾರೀ ಅಳ್ವಿಕೆಗೆ ಹಾಗೂ ಅದರ ಕೆಲವು ಜನ–ವಿರೋಧೀ ಧೋರಣೆಗಳಿಗೆ ಪ್ರತಿರೋಧ ನಿರ್ಮಿಸುವಲ್ಲಿ ಈ ಸಹಕಾರ ಮಹತ್ವದ ಒಂದು ಪಾತ್ರ ವಹಿಸುತ್ತದೆ ಎಂಬುದನ್ನು ಮನಗಾಣಬೇಕು. ಭಾರತೀಯ ಅರ್ಥ ವ್ಯವಸ್ಥೆಯು ಬಿಕ್ಕಟ್ಟಿನ ಆಳವಾಗುತ್ತಿರುವ, ಮತ್ತು ಆ ಬಿಕ್ಕಟ್ಟಿನ ಹೊರೆಯನ್ನು ಜನಸಾಮಾನ್ಯರ ಹೆಗಲ ಮೇಲೆ ರಾಚಿಸುವ ಆಳುವ ವರ್ಗಗಳ ಪ್ರಯತ್ನಗಳ ಹಾಗೂ ಜನಗಳ ಪ್ರತಿರೋಧವನ್ನು ದಮನ ಮಾಡಲು ಅವರ ಹಕ್ಕು, ಸ್ವಾತಂತ್ರ್ಯಗಳ ಮೇಲೆ ಆಳುವ ಪಕ್ಷ ಹೆಚ್ಚೆಚ್ಚು ಆಘಾತ ನಡೆಸುತ್ತಿರುವ ಹಿನ್ನೆಲೆಯಲ್ಲಿ ಜಾತ್ಯತೀತ ವಿರೋಧ ಪಕ್ಷಗಳ ಬೆಂಬಲ ಪಡೆಯುವುದು ಮಹತ್ವದ್ದಾಗುತ್ತದೆ. ಆ ಪಕ್ಷಗಳಿಗೂ, ಆಳುವ ಪಕ್ಷಕ್ಕೂ ಇರುವ ತಿಕ್ಕಾಟ ಹಾಗೂ ವೈರುಧ್ಯಗಳಿಂದಾಗಿ ಅವು ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ಕಾರ್ಮಿಕ ವರ್ಗ ಮತ್ತು ರೈತರ ಕೆಲವು ಬೇಡಿಕೆಗಳ ಪ್ರಶ್ನೆಗಳ ಮೇಲೆ ಎಡ ಪಕ್ಷಗಳೊಂದಿಗೆ ಸಹಕರಿಸಬೇಕಾಗಿ ಬರುತ್ತದೆ. ಇದು ಈ ಪಕ್ಷಗಳನ್ನು ಅನುಸರಿಸುವ ಜನ ಸಮೂಹಗಳನ್ನು ಐಕ್ಯ ಕಾರ್ಯಾಚರಣೆಗಳತ್ತ ಸೆಳೆದು ಸರಕಾರದ ಜನ–ವಿರೋಧೀ ಧೋರಣೆಗಳ ವಿರುದ್ಧ ಪ್ರತಿರೋಧವನ್ನು ಬಲಪಡಿಸುವಲ್ಲಿ ನೆರವಾಗುತ್ತದೆ.

ಅನುಕೂಲ ವಾತಾವರಣ

ಸಮಸ್ತ ದೇಶವನ್ನು ಒಟ್ಟಾಗಿ ಪರಿಶೀಲಿಸುವಾಗ ಎಡ ಪಕ್ಷಗಳು ನಿಸ್ಸಂಶಯವಾಗಿಯೂ ದುರ್ಬಲವಾಗಿವೆ. ಆದರೆ ಪರಿಸ್ಥಿತಿ ಎಡ ಆಂದೋಲನದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಅನುಕೂಲವಾಗಿದೆ. ವಾತಾವರಣದಲ್ಲಿ ಸ್ಫೂರ್ತಿ ತುಂಬಿಸಿ ಚುರುಕು ತರುವಲ್ಲಿ ಪಶ್ಚಿಮ ಬಂಗಾಳ ಹಾಗೂ ತ್ರಿಪುರಾಗಳ ಎರಡು ಎಡರಂಗ ಸರ್ಕಾರಗಳು ಮಹತ್ವದ ಪಾತ್ರ ವಹಿಸುತ್ತಿವೆ. ದೇಶದ ಎಡ ಆಂದೋಲನದಲ್ಲಿ ಸಿ.ಪಿ ಐ.(ಎಂ) ಮತ್ತು ಸಿ.ಪಿ ಐ. ಎರಡು ಪ್ರಮುಖ ಶಕ್ತಿಗಳಾಗಿದ್ದು ಇವರ ನಡುವಿನ ಸಹಕಾರ ಎಡ ಆಂದೋಲನವನ್ನು ಹಾಗೂ ಪ್ರಜಾಪ್ರಭುತ್ವ ಆಂದೋಲನವನ್ನು ಬೆಳೆಸುವಲ್ಲಿ ಅತೀ ಅಗತ್ಯ ಎನ್ನುವುದು ಕೂಡಾ ನಿಜ.

ಇಂದು ಜಗತ್ತು ನ್ಯೂಕ್ಲಿಯರ್ ಯುದ್ಧದ ಬೆದರಿಕೆಯನ್ನು ಎದುರಿಸುತ್ತಿದೆ. ರೇಗನ್ ಆಡಳಿತ ಇದರಲ್ಲಿ ವಿನಾಶಕಾರೀ ಪಾತ್ರ ವಹಿಸುತ್ತಿದೆ. ಭಾರತ ಸರಕಾರ ಶಾಂತಿಯ ಬಗ್ಗೆ ತನ್ನ ಧೋರಣೆಯನ್ನು ಕೇವಲ ರಾಜತಾಂತ್ರಿಕ ಕ್ಷೇತ್ರಕ್ಕೇ ಸೀಮಿತಗೊಳಿಸಿದೆ. ಇದೂ ಮುಖ್ಯ. ಆದರೆ ಇದಷ್ಟೇ ಸಾಲುವುದಿಲ್ಲ. ಇಂತಹ ಸಂದರ್ಭದಲ್ಲಿ ನ್ಯೂಕ್ಲಿಯರ್ ಯುದ್ಧದ ವಿರುದ್ಧ ಹಾಗೂ ಶಾಂತಿಯ ಸಂದೇಶವನ್ನು ದೇಶದ ಮೂಲೆ–ಮೂಲೆಗೂ ಕೊಂಡೊಯ್ದು ಶಾಂತಿ ಆಂದೋಲನ ಒಂದು ಸಾಮೂಹಿಕ ಆಂದೋಲನವಾಗಿಬಿಟ್ಟು ಈ ಎರಡು ಪಕ್ಷಗಳ ಮೇರೆ ಮೀರಿ ಬೆಳೆಗೂ ಪ್ರಧಾನ ಬೀರುವಂತೆ ಮಾಡುವುದು ನಮ್ಮ ಕರ್ತವ್ಯ.

ಸರಕಾರದ ಜನ ವಿರೋಧೀ ಧೋರಣೆಗಳಿಂದಾಗಿ ಕಾರ್ಮಿಕ ವರ್ಗದ, ರೈತಾಪಿ ಜನ ಹಾಗೂ ಇತರ ದುಡಿಯುವ ಜನಗಳ ನಡುವೆ ಅಸಂತೃಪ್ತಿ ಹೆಚ್ಚುತ್ತಿರುವ ಸಮಯದಲ್ಲಿ, ಕಾಂಗ್ರೆಸ್ (ಐ) ಸರಕಾರ ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮ ದೇಶವನ್ನು ಆಳವಾಗಿ ಪ್ರವೇಶಿಸಲು ಹೆಬ್ಬಾಗಿಲು ತೆರೆದಿರುವಾಗ ಹಾಗೂ ಭಾರತೀಯ ಗುತ್ತೇದಾರಿ ಮನೆತನಗಳಿಗೆ ದೇಶದ ಜನ ಶಕ್ತಿ ಹಾಗೂ ಇತರ ಸಂಪನ್ಮೂಲಗಳನ್ನು ಸೂರೆಗೊಳ್ಳಲು ಪೂರ್ಣ ಅವಕಾಶ ನೀಡಿರುವಾಗ ಸಾಮೂಹಿಕ ಹೋರಾಟಗಳಿಗೆ ನೇತೃತ್ವ ನೀಡಿ ಐಕ್ಯ ಕಾರ್ಯಾಚರಣೆಗಳನ್ನು ಸಂಘಟಿಸಿ ಜನತೆಯ ಅಸಂತೃಪ್ತಿಯನ್ನು ಪ್ರಜಾಸತ್ತಾತ್ಮಕ ಮಾರ್ಗಗಳತ್ತ ತಿರುಗಿಸುವುದು ಅತೀ ಮಹತ್ವದ್ದಾಗುತ್ತದೆ.

ಐಕ್ಯ ಕಾರ್ಯಾಚರಣೆಗಳು ಅಗತ್ಯ

ಇದೇ ಅಸಂತೃಪ್ತಿಯನ್ನು ವಿಚ್ಛಿದ್ರಕಾರೀ, ಪ್ರತ್ಯೇಕತಾವಾದಿ ಹಾಗೂ ಕೋಮುವಾದಿ ಶಕ್ತಿಗಳು ಸಾಮ್ರಾಜ್ಯಶಾಹಿಯ ಬೆಂಬಲದೊಂದಿಗೆ ದೇಶವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ವಿಚ್ಛಿದ್ರಕಾರೀ ಮಾರ್ಗಕ್ಕೆ ಎಳೆಯಲು ಪ್ರಯತ್ನಿಸುತ್ತಿರುವಾಗ, ಮತ್ತು ಕೇಂದ್ರ ಸರಕಾರ ಈ ಶಕ್ತಿಗಳನ್ನು ಕುರಿತಂತೆ ಉದಾಸೀನ ನಿಲುವು ತಳೆದಿರುವಾಗ ಅವರ ಕುತಂತ್ರಗಳನ್ನು ಬಯಲಿಗೆಳೆದು, ಅವರನ್ನು ಜನರಿಂದ ದೂರ ಮಾಡಿ ಸೋಲಿಸುವುದು ಎಡಶಕ್ತಿಗಳ ಕರ್ತವ್ಯವಾಗುತ್ತದೆ. ಇದರಲ್ಲಿಯೂ ಪ್ರಮುಖ ಪಾತ್ರವನ್ನು ಸಿ.ಪಿ.ಐ. (ಎಂ) ಮತ್ತು ಸಿ ಪಿ ಐ ವಹಿಸಬೇಕಾಗುತ್ತದೆ.

ಅಸಂತೃಪ್ತಿ ಹೆಚ್ಚುತ್ತಿರುವ ಒಂದು ಘಟ್ಟದಲ್ಲಿ, ಸರಕಾರ ಜನತೆಯ ನೈಜ ಬೇಡಿಕೆಗಳನ್ನು ಸ್ವೀಕರಿಸುವ ಬದಲು ಅವರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಘಾತ ನಡೆಸಲು ಹಾಗೂ ಅವರ ಪ್ರಜಾಸತ್ತಾತ್ಮಕ ಆಂದೋಲನ ಹಾಗೂ ಹೋರಾಟಗಳನ್ನು ಬಗ್ಗುಬಡಿಯಲು ಕಟಿಬದ್ಧವಾಗಿರುವಾಗ ಪ್ರಜಾಪ್ರಭುತ್ವದ ಮೇಲೆ ನಡೆಯುವ ಈ ಆಘಾತಗಳ ವಿರುದ್ಧ ವ್ಯಾಪಕ ಪ್ರತಿರೋಧ ಸಂಘಟಿಸುವುದು ಕೂಡಾ ನಮ್ಮ ಜವಾಬ್ದಾರಿಯಾಗುತ್ತದೆ. ಆದ್ದರಿಂದ ನಮ್ಮೆರಡು ಪಕ್ಷಗಳು ಎಡ ಪಕ್ಷಗಳ ಪರವಾಗಿ ಮತ್ತು ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಐಕ್ಯ ಕಾರ್ಯಾಚರಣೆಗಳನ್ನು ಸಂಘಟಿಸುವಲ್ಲಿ ಪರಸ್ಪರ ಸಹಕರಿಸುವುದು ಇಂದು ಅತ್ಯಗತ್ಯ.

[ಮುಗಿಯಿತು]

ಕಾ|| ಎನ್. ಕೆ. ಉಪಾಧ್ಯಾಯರ ಸೋವಿಯತ್ ರಶ್ಯಾ ಪ್ರವಾಸದ ಅನುಭವಗಳು | 4

ಎಲ್ಲರಿಗೂ ಪುಕ್ಕಟೆ ಶಿಕ್ಷಣ

ಎಲ್ಲ ಮಕ್ಕಳಿಗೂ ಪುಕ್ಕಟೆಯಾಗಿ ಶಿಕ್ಷಣ ಒದಗಿಸುವ ಕ್ರಮ ರಶ್ಯಾ ದೇಶದಲ್ಲಿ ಕಂಡ ಅತಿ ಮಹತ್ವದ ಆಕರ್ಷಣೆ. ಈ ಮುಂಚೆ ಪ್ರಾಥಮಿಕ ಶಿಕ್ಷಣ ಮಗುವಿನ 7ನೇ ವರ್ಷದಲ್ಲಿ ಪ್ರಾರಂಭವಾಗುತ್ತಿತ್ತು. ಈ ವರ್ಷದಿಂದ ಅದನ್ನು 6ನೇ ವಯಸ್ಸಿಗೆ ಬದಲಿಸಲಾಗಿದೆ. 7ನೇ ವರ್ಗದಲ್ಲಿ ಪಾಸಾದ ಕೂಡಲೇ ಮಗುವಿನ ಒಲವಿಗನುಸರಿಸಿ ಶಿಕ್ಷಣ ಕೊಡಲಾಗುವುದು. ಅಲ್ಲಿಂದಲೇ ತಾಂತ್ರಿಕ ಶಿಕ್ಷಣದ ಪ್ರಾರಂಭ. 7ನೇ ವರ್ಗ ಪಾಸಾದ ವಿದ್ಯಾರ್ಥಿ ನೌಕರಿ ಸೇರಲು ಅಪೇಕ್ಷಿಸಿದರೆ, ಅದನ್ನು ಪೂರೈಸಲಾಗುವುದು. ಆದರೆ ಆತ 11ನೇ ವರ್ಗ ಪಾಸಾಗಲೇಬೇಕು. ಸೋವಿಯತ್ ರಶ್ಯದಲ್ಲಿ ಪ್ರತಿಯೊಬ್ಬ ನಾಗರೀಕನ ಕನಿಷ್ಠ ಶಿಕ್ಷಣ ಮಟ್ಟ 11ನೇ ಸ್ಟ್ಯಾಂಡರ್ಡ್ ಆಗಿರುತ್ತದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸೋವಿಯತ್ ಸರಕಾರ ಪುಕ್ಕಟೆಯಾಗಿಯೇ ಎಲ್ಲಾ ವ್ಯವಸ್ಥೆ ಮಾಡಿದೆ. ಒಂದು ನಯಾಪೈಸೆ ಖರ್ಚಿಲ್ಲದೆ ಅತಿ ಉಚ್ಚ ಮಟ್ಟದ ಶಿಕ್ಷಣ ಪಡೆಯಬಹುದು, ಆ ಅವಕಾಶವನ್ನು ಸೋವಿಯತ್ ಯುವಕರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸೋವಿಯತ್ ಶಿಕ್ಷಣ ಪದ್ಧತಿಯಲ್ಲಿ 5 ರಿಂದ 1 ರವರೆಗೆ ರ್‍ಯಾಂಕ್ ಎಣಿಸುತ್ತಾರೆ. 5 ರಿಂದ 3 ರವರೆಗೆ ರ್‍ಯಾಂಕ್ ಪಡೆದವರಿಗೆ ಧನಸಹಾಯ ಹೆಚ್ಚಿಸುತ್ತಾರೆ. ಇತರರಿಗೂ ಕೂಡ ಪುಕ್ಕಟೆ ಶಿಕ್ಷಣ, ಪುಸ್ತಕ, ಹಾಸ್ಟೆಲ್ ವ್ಯವಸ್ಥೆಯ ಜೊತೆಯಲ್ಲಿ ಸ್ಕಾಲರ್‌ಶಿಪ್ ಕೊಡುತ್ತಾರೆ. ಅತಿ ಉಚ್ಚ ಮಟ್ಟದ ತಾಂತ್ರಿಕ ಶಿಕ್ಷಣ ಒದಗಿಸುತ್ತಾರೆ.

ಜೋಸೆಫ್ ಸ್ಟಾಲಿನ್ ಕಟ್ಟಿದ 37 ಮಹಡಿಯ ಅತಿ ದೊಡ್ಡದಾದ ಕಟ್ಟಡ ಮಾಸ್ಕೋ ವಿಶ್ವವಿದ್ಯಾಲಯ. ಲೆನಿನ್ ಗುಡ್ಡದ ಮೇಲಿರುವ ಈ ಶಿಕ್ಷಣಕೇಂದ್ರ 8 ಮಿಲಿಯ ಜನ ಸಂಖ್ಯೆಯಿರುವ ಇಡೀ ಮಾಸ್ಕೋ ನಗರದ ಭವ್ಯ ಸುಂದರ ದೃಶ್ಯದ ತಾಣವಾಗಿದೆ. 30 ಸಾವಿರ ವಿದ್ಯಾರ್ಥಿಗಳನ್ನು ಹೊಂದಿರುವ ಈ ವಿಶ್ವ ವಿದ್ಯಾಲಯದಲ್ಲಿ 10 ಸಾವಿರಕ್ಕೂ ಮೇಲ್ಪಟ್ಟು ಶಿಕ್ಷಕರಿದ್ದಾರೆ. ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಎಲ್ಲ ಸೌಲಭ್ಯ ಒದಗಿಸಿಕೊಡುವ ವಿದ್ಯಾಕೇಂದ್ರ ಇದಾಗಿದೆ. ಈ ಕಟ್ಟಡವನ್ನು ಸಂಪೂರ್ಣ ಸಂದರ್ಶಿಸಬೇಕಾದರೆ ಮೂರು ವರ್ಷ ಹಿಡಿಯ ಬಹುದೆಂದು ನನ್ನ ದ್ವಿಭಾಷಿ ಙ್ನೀಲ್ಗ್ಳ ಅಭಿಪ್ರಾಯ. ಇತರ ದೇಶಗಳ ವಿದ್ಯಾರ್ಥಿಗಳೂ ಇಲ್ಲಿ ಕಲಿಯುತ್ತಿದ್ದಾರೆ.

ಲುಮುಂಬಾ ವಿಶ್ವವಿದ್ಯಾಲಯ ಎರಡನೇದ್ದು. ಇದರಲ್ಲಿ 15 ಸಾವಿರ ವಿದ್ಯಾರ್ಥಿಗಳು. 500 ವಿದೇಶಿ ಯುವಕ-ಯುವತಿಯರು ಇಲ್ಲಿದ್ದಾರೆ. ಕರ್ನಾಟಕ ಹಾಗೂ ಭಾರತದ ವಿದ್ಯಾರ್ಥಿಗಳೂ ಇಲ್ಲಿದ್ದಾರೆ. ನಾವು ಪುಕ್ಕಟೆಯಾಗಿ ಉತ್ತಮ ಶಿಕ್ಷಣ ಪಡೆಯುತ್ತೇವೆಂದು ನಮಗೆ ಭೆಟ್ಟಿಯಾದ ಭಾರತೀಯ ವಿದ್ಯಾರ್ಥಿಗಳು ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಶಿಕ್ಷಣವೆಲ್ಲ ರಶ್ಯಾ ಭಾಷೆಯಲ್ಲೇ. ಆದ ಕಾರಣ ವಿದೇಶಗಳ ವಿದ್ಯಾರ್ಥಿಗಳು 6 ತಿಂಗಳು ರಶ್ಯಾ ಭಾಷೆ ಕಲಿಯಬೇಕು; ಅದನ್ನು ಕಲಿಸಲಾಗುವುದು. ಮನಸ್ಸಿಟ್ಟು ಕಲಿತರೆ ಏನೂ ತೊಂದರೆ ಇಲ್ಲೆಂದು ನಮ್ಮ ವಿದ್ಯಾರ್ಥಿಗಳ ಅಭಿಪ್ರಾಯ. ಅವರಿಗೆ ಸೋವಿಯತ್ ಸರಕಾರ ಕೊಡುವ 90 ರೂಬಲ್ಸ್ ಸ್ಟೈಫಂಡ್‌ನಲ್ಲಿ ಉತ್ತಮ ಜೀವನ ನಡೆಸುತ್ತೇವೆಂದೂ, ಸರ್ಕಸ್, ಬ್ಯಾಲೆ, ಸಿನಿಮಾಗಳಿಗೂ ಸಾಕಾಗುತ್ತದೆಂದೂ ಅವರ ಹೇಳಿಕೆ. ತಮಗೆ ಸಿಗುವ 45 ದಿವಸಗಳ ವಾರ್ಷಿಕ ರಜಾ ದಿನಗಳಲ್ಲಿ 8-10 ವಿದ್ಯಾರ್ಥಿಗಳು ಗುಂಪಾಗಿ ಕೆಲಸ ಮಾಡುತ್ತೇವೆಂದು ಹೇಳಿದರೆ, ಅಂಥವರಿಗೆ ಉದ್ಯೋಗ ಒದಗಿಸಲಾಗುವುದೆಂದೂ, ಆ ಕಾಲಾವಧಿಯಲ್ಲಿ ಪ್ರತಿಯೊಬ್ಬ ಒಂದು ಸಾವಿರದಷ್ಟು ರೂಬಲ್ಸ್ ಸಂಪಾದಿಸ ಬಹುದೆಂದೂ ಆ ಹಣದಿಂದ ಭಾರತ ದೇಶಕ್ಕೂ ಬಂದು ಹೋಗ ಬಹುದೆಂದೂ (ಎರಡು ವರ್ಷಕ್ಕೊಮ್ಮೆ) ಅವರ ಅನಿಸಿಕೆ. (ಭಾರತಕ್ಕೆ ವಿಮಾನದಲ್ಲಿ ಬಂದು ಹೋಗ ಬೇಕಾದರೆ ಒಂದು ಸಾವಿರ ರೂಬಲ್ಸ್ ಬೇಕು)

ಪ್ರತಿಯೊಂದು ವರ್ಗದಲ್ಲಿ 20 ರಿಂದ 30 ವಿದ್ಯಾರ್ಥಿಗಳು ಮಾತ್ರ. ಬೆಳಗ್ಗೆ ಉಪನ್ಯಾಸ ಮಧ್ಯಾಹ್ನ ವಿದ್ಯಾರ್ಥಿಗಳು 2-3 ಗುಂಪುಗಳಾಗಿ ಬೆಳಗಿನ ಜಾವದ ಪಾಠದ ಪುನರ್ವಿಮರ್ಷೆ ಮಾಡಬೇಕು, ಚರ್ಚೆ ಮಾಡಬೇಕು, ಪಠಣ ಮಾಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಕರ ವ್ಯಕ್ತಿಗತ ಗಮನ. ಹೀಗಾಗಿ ಅತಿ ದಡ್ಡನಲ್ಲದೆ ಬೇರೆ ಯಾವ ವಿದ್ಯಾರ್ಥಿ ಕೂಡ "ಕಡೆಗಣಿಸಲಾಗಿದೆ"ಂಬ ನೆವದಿಂದ ನಾಪಾಸಾಗಲು ಸಾಧ್ಯವಿಲ್ಲ. ಸೆಮಿಸ್ಟರ ಪದ್ಧತಿ ಮೂಲಕ ಪರೀಕ್ಷೆ ನಡೆಸಲ್ಪಡುತ್ತಿದೆ. ಯಾವ ತರದ ಗೊಂದಲವಾಗಲೀ ಶಿಕ್ಷಣ ಕೇಂದ್ರಗಳಲ್ಲಿ ಪರೀಕ್ಷಾ ಪದ್ಧತಿಯಲ್ಲಿ ಕಂಡು ಬರುತ್ತಿಲ್ಲ.

6 ರಿಂದ 14 ವರ್ಷದ ಮಕ್ಕಳಿಗೆ ಕಾರ್ಮಿಕ ಸಂಘಗಳು ನಡೆಸುತ್ತಿರುವ ಪಯನಿಯರ್ ಕ್ಯಾಂಪ್‌ಗಳಲ್ಲಿ ಕಲೆ, ನಾಟಕ, ಗಾಯನ, ಹಾಡು ಹಾಗೆಯೇ ವಿಮಾನ, ಮೋಟರ್ ಇಂಜನ್ ಮೊದಲಾದವುಗಳ ತಯಾರಿಕೆಯ ಶಿಕ್ಷಣ ಕೊಡಲಾಗುವುದು, ವೋಲ್ಗೊಗ್ರಾಡಿನ ಒಂದು ಪಯನಿಯರ್ ಕ್ಯಾಂಪಿನಲ್ಲಿ ವಿದ್ಯಾರ್ಥಿಗಳು ತಯಾರಿಸಿದ ವಿಮಾನ, ಟೆಲಿಫೋನ್ ಹಾಗೆಯೇ ಇತರ ಕಲಾಕೃತಿಗಳನ್ನು ಕಂಡೆವು. ಎಳೆ ವಯಸ್ಸಿನಲ್ಲಿಯೇ ಅಂಥ ಶಿಕ್ಷಣ ಒದಗಿಸುವುದರಿಂದ ಹೆಚ್ಚಿನ ಅಭ್ಯಾಸಕ್ಕೆ ಸಹಾಯವಾಗುತ್ತದೆ. ಮಕ್ಕಳ ತಿಳುವಳಿಕೆಯನ್ನು ವಿಕಾಸಗೊಳಿಸಲು ಅದು ಒಳ್ಳೆ ಅವಕಾಶ. ಬೆಂಗಳೂರು ಹೈಕೋರ್ಟಿನ ಅರ್ಧ ಭಾಗದಷ್ಟಿರುವ ಎರಡು ಮಹಡಿಯ ಭವ್ಯ ಭವನ. ಹಲವಾರು ಕೊಠಡಿಗಳಲ್ಲಿ ನಾನಾ ಬಗೆಯ ವೃತ್ತಿ ಶಿಕ್ಷಣ ಪಡೆಯುವ ಸೌಲಭ್ಯ. ಉತ್ತಮ ಶಿಕ್ಷಕರ ವ್ಯವಸ್ಥೆ ಯಾವ ಖರ್ಚಿಲ್ಲದೇ ಎಳೆ ಮಕ್ಕಳಿಗೆ ತಮ್ಮ ಬುದ್ಧಿ ವಿಕಾಸಗೊಳಿಸಲು ಪೂರ್ಣ ಅವಕಾಶ. ಕಾರ್ಮಿಕ ಸಂಘ ಮತ್ತು ಸರಕಾರ ಅಂಥ ಪಯನಿಯರ್ ಕ್ಯಾಂಪುಗಳ ವ್ಯವಸ್ಥಾಪಕರು. ಪುಕ್ಕಟೆ ಶಿಕ್ಷಣದ ಜೊತೆಯಲ್ಲೇ ಎಳೆ ಮಕ್ಕಳ ವೈಜ್ಞಾನಿಕ ದೃಷ್ಟಿಕೋನದ ವಿಕಾಸಕ್ಕೆ ಸಹಾಯವಾಗುವ ಇಂಥ ಪಯನಿರ್ ಕ್ಯಾಂಪುಗಳು ಸೋವಿಯತ್ ಸರಕಾರ ಮಕ್ಕಳಿಗೆ, ಯುವಕರಿಗೆ ಒದಗಿಸಿರುವ ಅತಿ ದೊಡ್ಡ ಕೊಡುಗೆಯಾಗಿದೆ.

– ಎನ್ಕೆ

ವಿಶ್ವ ಶಾಂತಿ ದಿನಾಚರಣೆ

ಜಾಗತಿಕ ಕಾರ್ಮಿಕ ಸಂಘಗಳ ಫೆಡರೇಶನ್ (ಡಬ್ಲ್ಯೂ ಎಫ್ ಟಿ ಯು) ನ ಕರೆಯಂತೆ ಉಡುಪಿಯಲ್ಲಿ ಸೆಪ್ಟಂಬರ್ 1, 1985 ನ್ನು ಸಿ.ಐ.ಟಿ.ಯು. ನ ಆಶ್ರಯದಲ್ಲಿ "ವಿಶ್ವಶಾಂತಿ ದಿನ"ವನ್ನಾಗಿ ಆಚರಿಸಲಾಯಿತು. ಬೀಡಿ, ಹಂಚು ಮುಂತಾದ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ನೌಕರರು ಅಧಿಕ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಬಂದು ಸತ್ಯಮೂರ್ತಿ ಸಭಾ ಭವನದಲ್ಲಿ ಸಾರ್ವಜನಿಕ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಟಿ ಅಂಗರ ಅವರು ಶಸ್ತ್ರಾಸ್ತ್ರಗಳ ತಯಾರಿಕೆಗಾಗಿ ಖರ್ಚು ಮಾಡಲ್ಪಡುತ್ತಿರುವ ಕೋಟಿಗಟ್ಟಲೆ ಡಾಲರುಗಳನ್ನು ಮಾನವ ಸಮುದಾಯವನ್ನು ಕಾಡುತ್ತಿರುವ ಸಮಸ್ಯೆಗಳಾದ ಬಡತನ, ನಿರುದ್ಯೋಗ ಇತ್ಯಾದಿಗಳನ್ನು ತೊಡೆದು ಹಾಕಲು ವಿನಿಯೋಗಿಸುತ್ತಿದ್ದರೆ ನಾವು ಎಷ್ಟೋ ಪ್ರಗತಿ ಸಾಧಿಸಬಹುದಿತ್ತೆಂದರು.

ಎಸ್.ಎಫ್.ಐ. ದ. ಕ. ಜಿಲ್ಲಾ ಸಮಿತಿಯ ಅಧ್ಯಕ್ಷ ವಿಶ್ವನಾಥರು ಹಾಗೂ ಡೆವಿಡ್ ಕರ್ಕಡ ಮಾತನಾಡಿ, ಅಮೆರಿಕನ್ ಸಾಮ್ರಾಜ್ಯಶಾಹಿಗಳು ಪಾಕಿಸ್ತಾನಕ್ಕೆ ಅಪಾರ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವುದರ ಮೂಲಕ, ಡಿಯಾಗೋ ಗಾರ್ಸಿಯಾ, ಶ್ರೀಲಂಕಾ ಮತ್ತು ಬಾಂಗ್ಲಾ ದೇಶಗಳಲ್ಲಿ ಸೈನಿಕ ನೆಲೆಗಳನ್ನು ಸ್ಥಾಪಿಸುವ ಮೂಲಕ ಭಾರತವನ್ನು ಸುತ್ತುವರಿದಿದ್ದಾರಲ್ಲದೆ, ನಮ್ಮ ದೇಶದ ವಿಭಾಜಕ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟು ಅಸ್ಥಿರತೆಯನ್ನು ಉಂಟು ಮಾಡಲು ಹವಣಿಸುತ್ತಿದ್ದಾರೆಂದು ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಜೆ. ಎಸ್. ಭಟ್ಟರು ಅಣು ಯುದ್ಧದ ಭೀಕರ ಪರಿಣಾಮಗಳನ್ನು ವಿವರಿಸಿದರಲ್ಲದೆ, ಸಮಾಜವಾದಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗಬಾರದು, ಸೋವಿಯತ್ ಒಕ್ಕೂಟವೇ ಮೊದಲಾದ ಸಮಾಜವಾದಿ ರಾಷ್ಟ್ರಗಳನ್ನು ಬೆಂಬಲಿಸುವುದು ದುಡಿಯುವ ಜನರ ಆದ್ಯ ಕರ್ತವ್ಯವೆಂದರು.

ಆರಂಭದಲ್ಲಿ ಸಾಧು ಅಮೀನರು ಸ್ವಾಗತಿಸಿದರು ಮತ್ತು ಕೊನೆಯಲ್ಲಿ ರಾಮಕುಂದರ್ ವಂದಿಸಿದರು.

●

ಯುವಜನ ವೇದಿಕೆ

ಬಸ್ರೂರ ಗ್ರಾಮದ ಡಿ.ವೈ.ಎಫ್.ಐ ಯ ಸಭೆ ಎಂ. ಬಸವನವರ ಅಧ್ಯಕ್ಷತೆಯಲ್ಲಿ ಸೇರಿ, ಸಂಘಟನೆಯ ಚಟುವಟಿಕೆಗಳನ್ನು ವಿಮರ್ಶಿಸಿತು. ಕೆ ಬಾಬೂಪೂಜಾರಿಯವರು ಅಧ್ಯಕ್ಷರಾಗಿರುವ 15 ಜನರ ಹೊಸ ಸಮಿತಿ ನೇಮಿಸಲಾಯಿತು.

ಉಡುಪಿ ಕೊಡಲೂರಿನಲ್ಲಿ ಡಿ. ವೈ. ಎಫ್.ಐ. ಸಭೆಯಲ್ಲಿ ಜೀವವಿಮಾ ನೌಕರರ ಸಂಘದ ಮುಖಂಡರಾದ ವಿಶ್ವನಾಥರೈಯವರು ಮುಖ್ಯ ಅಥಿತಿಗಳಾಗಿ ಮಾತಾಡಿ ಕೇಂದ್ರ ಸರಕಾರದ ಧೋರಣೆಯಿಂದ ಯುವಜನತೆ ಎದುರಿಸಬೇಕಾದ ಸಮಸ್ಯೆಗಳನ್ನು ವಿವರಿಸಿದರು.

ಬಾಬೂ ಅವರು ಅಧ್ಯಕ್ಷರಾಗಿರುವ ಹೊಸ ಸಮಿತಿ ರಚಿಸಲಾಯಿತು. ರಮೇಶ್ ಮೆಂಡನ್ ಸಭೆಯ ಅಧ್ಯಕ್ಷತೆ ವಹಿಸಿದ್ಧರು.

ಕುಂದಾಪುರ ವಿದ್ಯಾರ್ಥಿ ಯುವ ಸಂಘಟನೆಯ ನೇತೃತ್ವದಲ್ಲಿ ಚಿದಾನಂದ ತೆಗ್ಗಿಹಳ್ಳಿಯವರು ತಯಾರಿಸಿರುವ "ಮಹಾಯುದ್ಧಗಳು ಮತ್ತು ವಿಶ್ವ ಶಾಂತಿ" ಎಂಬ ಐತಿಹಾಸಿಕ ಚಿತ್ರಗಳ ಪ್ರದರ್ಶನ ನಡೆಸಲಾಯಿತು, ಸಾವಿರಾರುಜನ ಅದನ್ನು ಈಕ್ಷಿಸಿ ಪ್ರಶಂಸಿಸಿದರು.

ವಡೇರ ಹೋಬಳಿ ಡಿ.ವೈ.ಎಫ್.ಐ. ಯ ವಾರ್ಷಿಕ ಸಭೆ ಶಂಕರ ಭಾರ್ವಿಯ ಅವರು ಅಧ್ಯಕ್ಷತೆಯಲ್ಲಿಸೇರಿ, ಚಟುವಟಿಕೆಗಳ ವಿಮರ್ಷೆ ನಡೆಸಿ, ಸಂಘಟನೆಯನ್ನು ಬಲಪಡಿಸಲು, ವಿಶಾಲ ಗೊಳಿಸಲು ನಿರ್ಧರಿಸಿತು. ಆನಂದ ಅವರ ಅಧ್ಯಕ್ಷತೆಯಲ್ಲಿ ಹೊಸ ಸಮಿತಿ ರಚಿಸಲಾಯಿತು.

○

ಜನರ ಸಮಸ್ಯೆಗಳತ್ತ ಗಮನ

ಡಿ. ವೈ. ಎಫ್. ಐ. ನ ಉಳ್ಳಾಲ ವಲಯ ಸಮಿತಿ ಸಭೆ ಸೇರಿ ಈ ಕೆಳಗಿನ ತೀರ್ಮಾನಗಳನ್ನು ತೆಗೆದುಕೊಂಡಿತು. ಸಭೆಯ ಅಧ್ಯಕ್ಷತೆಯನ್ನು ಯು. ಬಿ. ನಾರಾಯಣ ವಹಿಸಿದ್ದರು.

ಅಂಬ್ಲಮೊಗರು ಗ್ರಾಮದಲ್ಲಿ ಶ್ರೀಮತಿ ಆಯೇಷಾ ರಜಾಕ್ ಎಂಬ ಮುಸ್ಲಿಂ ಮಹಿಳೆಯ ಮೇಲೆ ವರದಕ್ಷಿಣೆ ವಿಷಯದಲ್ಲಿ ನಡೆದ ಹಲ್ಲೆಯನ್ನು ಸಭೆಯು ತೀವ್ರವಾಗಿ ಖಂಡಿಸಿ, ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದೂ ಕೆ.ಎಸ್.ಆರ್. ಟಿ.ಸಿ. ಬಸ್ ದರಗಳನ್ನು ಏರಿಸಿದ್ದು ಜನ ವಿರೋಧಿ ನೀತಿಯಾಗಿದ್ದು, ಇದನ್ನು ಹಿಂತೆಗೆದುಕೊಳ್ಳದಿದ್ದರೆ ಸಾಮೂಹಿಕವಾಗಿ ಚಳುವಳಿಗಳನ್ನು ನಡೆಸಬೇಕೆಂದೂ, ತೊಕ್ಕೊಟ್ಟು ಚೆಕ್ ಪೋಸ್ಟ್ ಬಳಿ ಲಾರಿಗಳ ತಪಾಸಣೆಗಾಗಿ, ಲಾರಿಗಳನ್ನು "ಹೈವೇ" ರೋಡ್‌ನಲ್ಲಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ಅಡ್ಡಿ ಆತಂಕವಾಗುವುದರಿಂದ, ಕೂಡಲೇ ಅದಕ್ಕೆ ಬದಲಿ ವ್ಯವಸ್ಥೆ ಮಾಡಬೇಕೆಂದೂ ಪೆರ್ಮನ್ನೂರು, ಉತ್ತಾರ್ ಪದವು, ಕೋಟೆಕಾರ್ ಹಾಗೂ ಪಕೀರ್ ಚರ್ಚ್ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವಿದ್ದು, ಕೂಡಲೇ ಕೊಳವೆ ಬಾವಿಗಳನ್ನು ತೋಡಿಸಬೇಕೆಂದೂ, ತೊಕ್ಕೊಟ್ಟು ಮೈದಾನ್ ಸಮೀಪ ಕೊಳೆತ ಕಸಕಡ್ಡಿಗಳನ್ನು ರಾಶಿ ಹಾಕಿರುವುದರಿಂದ ಸಾರ್ವಜನಿಕರ ಆರೋಗ್ಯಕ್ಕೆ ತುಂಬಾ ಹಾನಿಕರವಾಗಿರುವುದರಿಂದ ಪಂಚಾಯತ್ ಆಡಳಿತಾಧಿಕಾರಿಗಳು [ಉಳ್ಳಾಲ ಪಟ್ಟಣ್ಣ] ಕೂಡಲೇ ಗಮನ ಹರಿಸಿ ಬದಲೀ ವ್ಯವಸ್ಥೆ ಮಾಡಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಯ್ತು.

●

ಬೀಡಿ ಕಾರ್ಮಿಕರ ಸಭೆ

ತಾ. 3-9-85ನೇ ಮಂಗಳವಾರ ಸಂಜೆ 8 ಗಂಟೆಗೆ ಸರಿಯಾಗಿ ಮಾರ್ನಮಿ ಕಟ್ಟೆ ಆಫೀಸಿನಲ್ಲಿ ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಾ|| ಲೋಕಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಧಾನ ಕಾರ್ಯದರ್ಶಿಯವರಾದ ಕಾ|| ವೀರಪ್ಪನವರು ಸಂಘದ ಚಟುವಟಿಕೆಗಳ ವರದಿಯನ್ನಿತ್ತರು. ಸಂಘಟನೆಯನ್ನು ಇನ್ನಷ್ಟು ವಿಸ್ತಾರ ಮಾಡುವಲ್ಲಿ ಎಲ್ಲಾ ಸದಸ್ಯರು ಸಕ್ರೀಯವಾಗಿ ದುಡಿಯುವ ಅಗತ್ಯವನ್ನು ವಿವರಿಸಿದರು.

ಕೋಶಾಧಿಕಾರಿಯಾದ ಕಾ|| ಕಮಲಾಕ್ಷ ಬಂಗೇರರು ರಾಯಚೂರು ಜಿಲ್ಲೆಯ ಯಲಬರ್ಗಿ ತಾಲೂಕಿನ ಕುದುರೆ ಮೋತಿಯ ಮಹಂತ ಸ್ವಾಮಿ ನಡೆಸಿದ ಅಮಾನವೀಯ ಕೃತ್ಯದ ವಿವರ ನೀಡಿದರು.

ಕುದುರೆ ಮೋತಿ ಹೋರಾಟ ಸಮಿತಿಯವರು ತಾ.12-9-85ರಂದು ನಡೆಸುವ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು. ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಮಜೂರರು ಭಾಗವಹಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ತಾ 22-9-85ರಿಂದ 24-6-85ರ ವರೆಗೆ ನಡೆಯಲ್ಲಿರುವ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿಯ ದ.ಕ. ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸುವ ದೆಸೆಯಲ್ಲಿ ಪ್ರದೇಶವಾರರಾಗಿ 25 ಸಭೆಯನ್ನು ಜರಗಿಸಬೇಕೆಂದು ತೀರ್ಮಾನವಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾರ್ಕ್ಸವಾದೀ ಕಮ್ಯೂನಿಸ್ಟ್ ಪಾರ್ಟಿಯ ದ.ಕ. ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡುವ ಅವಶ್ಯಕತೆ ಇಂದಿನ ರಾಜಕೀಯ ಪರಿಸ್ಥಿತಿ ನಮ್ಮ ಪಾರ್ಟಿಯ ಸ್ಥಾನಮಾನಗಳ ವಿವರವಿತ್ತು, ನಮ್ಮ ರಾಜಕೀಯ ಮುನ್ನಡೆಯನ್ನು ವಿವರಿಸಿದರು.

ಕಾರ್ಯದರ್ಶಿಯವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು. ○

ಹಸಿರು ಕಾರ್ಡು ವಿತರಣೆಯಲ್ಲಿ ತಾರತಮ್ಯ

ಮಾನ್ಯ ಕರ್ನಾಟಕ ಸರಕಾರದ ಘೋಷಣೆಯಂತೆ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಬಡಜನರಿಗೆ ಹಸಿರು ಕಾರ್ಡಿನ ಮೂಲಕ ಅಕ್ಕಿ ವಿತರಣೆ ಮಾಡುವ ಕಾರ್ಯಕ್ರಮವನ್ನು ಕೈಕೊಂಡಿದೆ. 3,500ಕ್ಕಿಂತ ಕಡಿಮೆ ಆದಾಯವಿರುವ ಬಡವರು ಈ ಹಸಿರು ಕಾರ್ಡಿನ ಯೋಜನೆಯ ವ್ಯಾಪ್ತಿಗೆ ಬರುವರೆಂದು ಸರಕಾರ ತನ್ನ ಹೇಳಿಕೆಯಲ್ಲಿ ತಿಳಿಯಪಡಿಸಿದೆ.

ಪುತ್ತೂರು ತಾಲೂಕಿನ ಎಲ್ಲಾ ಗ್ರಾಮಾಂತರ ಪ್ರದೇಶದಲ್ಲಿ 3.500 ಕ್ಕಿಂತಲೂ ಕಡಿಮೆ ವರಮಾನವಿರುವ ಬಡವರು ಶೇಕಡಾ 7 ರಷ್ಟು ಇದ್ದಾರೆ. ಇವರಲ್ಲಿ ಹೆಚ್ಚಿನವರು ಬೀಡಿ ಕಾರ್ಮಿಕರು, ಕೃಷಿ ಕಾರ್ಮಿಕರಾಗಿರುತ್ತಾರೆ. ಇಂತಹ ಕಾರ್ಮಿಕರಿಗೆ, ಅವರ ಆದಾಯ 3,500 ಕ್ಕಿಂತಲೂ ಹೆಚ್ಚಿಂದು ಕುಂಟು ನೆಪ ಹಾಕಿ ಬಡವರಿಗೆ ಹಸಿರು ಕಾರ್ಡು ನೀಡಲು ರೆವಿನ್ಯೂ ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ.

ಸರಕಾರದ ಅಧಿಕಾರಿ ವರ್ಗದ ಈ ತಾರತಮ್ಯ ಧೋರಣೆಯನ್ನ ಪುತ್ತೂರು ತಾಲ್ಲೂಕು ರೈತ ಸಂಘ ಖಂಡಿಸಿದೆ. ಹಳ್ಳಿಯ ಪ್ರದೇಶದ ಎಲ್ಲಾ ಬಡವರಿಗೂ ಈ ಹಸಿರು ಕಾರ್ಡು ದೊರೆಯಬೇಕು. ಹಾಗೆಯೇ ಪಟ್ಟಣ ಪ್ರದೇಶದಲ್ಲಿ ವಾಸಿಸುವ ಬಡವರಿಗೂ ಈ ಯೋಜನೆ ಅನ್ವಯಿಸಬೇಕೆಂದು ಪುತ್ತೂರು ತಾಲೂಕು ರೈತ ಸಂಘದ ಕಾರ್ಯದರ್ಶಿ ಪದ್ಮನಾಭ ನ್ಯಾಕರು ಸರಕಾರವನ್ನು ಒತ್ತಾಯಿಸಿದ್ದಾರೆ.

ಕಲಾವೃಂದದ ನೂತನ ಕಟ್ಟಡದ ಉದ್ಘಾಟನೆ

ತಾ|| 15-8-1985 ರಂದು ಜನಶಕ್ತಿ ಕಲಾವೃಂದದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಉಳ್ಳಾಲ ಬಂಡಿಕೊಟ್ಯದಲ್ಲಿ ಶ್ರೀ ಜೆ ಸದಾಶಿವ ಶೆಟ್ಟಿ, ಕೋರ್ಪರೇಟರ್ ಮಹಾನಗರಪಾಲಿಕೆ ಮಂಗಳೂರು, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಯು. ವಿ ಜ ಯಕುಮಾರ್ ಬಂಡಿಕೊಟ್ಯ ಇವರು ಧ್ವಜಾರೋಹಣವನ್ನು ನೆರವೇರಿಸಿದರು.

ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಯು ಕೆ. ಇಬ್ರಾಹಿಂ ಹಾಜಿ, ಲೂವಿಸ್ ಮೊಂತೇರೊ, ದಾಮೋದರ್ ಐಲ್, ಶಂಕರ್ ಸಾಲಿಯಾನ್, ಆರ್. ಕೆ. ಶೆಟ್ಟಿ ಬಿ. ಶೇಖರ ಬಂಗೇರ, ರಾಘವ ಕೆ. ಉಳ್ಳಾಲ್, ಬಿ. ಮಾಧವ ಇವರೆಲ್ಲಾ ಮಾತಾಡಿ ಅಂತರ ರಾಷ್ಟ್ರೀಯ ಯುವಕರ ವರ್ಷದ ಈ ಸಂದರ್ಭದಲ್ಲಿ ಸಮಾಜದಲ್ಲಿ ಯುವಕರ ಪಾತ್ರವನ್ನು ವಿವರವಾಗಿ ವಿವರಿಸಿದರು. ರಾಜೀವ ಮೆಂಡಸ್, ರಮೇಶ್ ಉಳ್ಳಾಲ್; ಗಂಗಾಧರ್‌ರವರು ಮಾತನಾಡಿದರು. ನಾರಾಯಣ ಉಳ್ಳಾಲ್ ಧನ್ಯವಾದ ಅರ್ಪಿಸಿದರು. ○

ಅಮೇರಿಕ : ಉಕ್ಕಿನ ಕೈಗಾರಿಕೆಯಲ್ಲಿ ಬಿಕ್ಕಟ್ಟು

ಜಗತ್ತಿನಲ್ಲಿಯೇ ಉಕ್ಕಿನ ಹಸ್ತದಂತಿದ್ದ ಅಮೇರಿಕ ತನ್ನ ಸಾರ್ವಭೌಮತ್ವವನ್ನು ಕಳೆದುಕೊಳ್ಳುತ್ತಿದೆ.

ವೀಲಿಂಗ್ ಪಿಟ್ಸ್‌ಬರ್ಗ ಉಕ್ಕು ನಿಗಮದ 8,200 ಕಾರ್ಮಿಕರು ಇತ್ತೀಚೆಗೆ ಮುಷ್ಕರದಲ್ಲಿ ತೊಡಗಿದ್ದಾರೆ. ಕಳೆದ 26 ವರ್ಷಗಳಲ್ಲಿ ಪ್ರಥಮಬಾರಿ ಉಕ್ಕಿನ ಕಾರ್ಖಾನೆಯಲ್ಲಿ ಪ್ರಬಲ ಮುಷ್ಕರ ಪ್ರಾರಂಭವಾಗಿದೆಂಬುದನ್ನು ಅದು ತೋರ್ಪಡಿಸುತ್ತಿದೆ.

ಅಮೇರಿಕದಲ್ಲಿ ಏಳನೇ ಸ್ಥಾನದಲ್ಲಿರುವ ಈ ನಿಗಮ ಪ್ರತಿ ವರ್ಷ ಒಂದು ಬಿಲಿಯ ಡಾಲರಿನ ವ್ಯವಹಾರ ನಡೆಸುತ್ತಿದೆ. 500 ಮಿಲಿಯ ಡಾಲರ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಿಲ್ಲೆಂದು ಜಾಹೀರ ಪಡಿಸಿ ದಿವಾಳಿಖೋರ ಕಾನೂನಿಗನುಸರಿಸಿ ಕಳೆದ ಕೆಲವು ತಿಂಗಳಿಂದ ಕಾರ್ಖಾನೆ ನಡೆಸುತ್ತಿತ್ತು. ಕಾರ್ಮಿಕರ ಜೊತೆಯಲ್ಲಿ ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿದು ಶೇ 18 ರಷ್ಟು ಸಂಬಳ ಮತ್ತಿನ್ನಿತರ ಸೌಲಭ್ಯಗಳಲ್ಲಿ ಕಡಿತ ಮಾಡಿ ಒಂದು ಗಂಟೆಗೆ 21.40 ಡಾಲರ್ ವೇತನವನ್ನು 17.50 ಕ್ಕಿಳಿಸಿತ್ತು.

ಅಮೇರಿಕದಲ್ಲಿಯ 9 ಉಕ್ಕಿನ ಕಾರ್ಖಾನೆಗಳ ಕಾರ್ಮಿಕರು ವೇತನ ಹೆಚ್ಚಳದ ಚರ್ಚೆ ವಿಫಲಗೊಂಡದ್ದರಿಂದ ಜುಲೈ 21 ರಿಂದ ಮುಷ್ಕರದಲ್ಲಿದ್ದಾರೆ.

ಜಗತ್ತಿನಲ್ಲೇ ಪ್ರಥಮ ಸ್ಥಾನದಲ್ಲಿದ್ದ ಅಮೇರಿಕದ ಉಕ್ಕಿನ ಕಾರ್ಖಾನೆ ಬಿಕ್ಕಟ್ಟನ್ನೆದುರಿಸುತ್ತಿದೆ. ಕಳೆದ ಕೆಲವು ವರ್ಷಗಳಿಂದ ತಮ್ಮ ಪೈಪೋಟಿಯನ್ನುಳಿಸಿಕೊಳ್ಳಲು ಪ್ರತಿ ವರ್ಷ ಮೂರು ಬಿಲಿಯ ಡಾಲರ್ ಖರ್ಚಿನಿಂದ ಕಾರ್ಖಾನೆಗಳನ್ನು ಆಧುನೀಕರಿಸಿದ ಪರಿಣಾಮವಾಗಿ ಹೆಚ್ಚು ಉತ್ಪಾದನೆಯಾಗುತ್ತಿರುವುದು, ಅದರ ಜೊತೆಯಲ್ಲಿಯೇ ಇನ್ನೂ ಹಳೇ ಕಾಲದ ಸರಂಜಾಮು ಉಳಿದಿರುವುದೇ ಈ ಬಿಕ್ಕಟ್ಟಿಗೆ ಕಾರಣವಾಗಿದೆ.

ಕೈಗಾರಿಕೋದ್ಯಮದಲ್ಲಿ ಮುಂದುವರಿದ ದೇಶಗಳಿಗಿಂತ ಅಮೇರಿಕದಲ್ಲಿಯ ಉಕ್ಕಿನ ಕಾರ್ಖಾನೆಗಳು ತಾಂತ್ರಿಕವಾಗಿ ಹಿಂದುಳಿದಿವೆ. ಸತತವಾಗಿ ಎರಕ ಹೊಯ್ಯುವ ಪದ್ಧತಿ ಜಪಾನಿನ 90 /. ಕಾರ್ಖಾನೆಗಳಲ್ಲಿದ್ದರೆ ಅಮೇರಿಕದಲ್ಲಿ ಅದು ಶೇ 38 ರಷ್ಟು ಮಾತ್ರ ಇದೆ.

ಹಳೆ ಕಾಲದ ತಾಂತ್ರಿಕತೆ ಮತ್ತು ಕಾರ್ಮಿಕರ ಹೆಚ್ಚಿನ ಖರ್ಚಿನಿಂದಾಗಿ ಯೂರೋಪ ಮತ್ತು ಪೂರ್ವ ಪ್ರದೇಶಗಳ ಉಕ್ಕಿಗಿಂತ ಅಮೇರಿಕದ ಉಕ್ಕು ಶೇ. 30 ರಷ್ಟು ದುಬಾರಿಯಾಗಿದೆ. ಅಮೇರಿಕದಲ್ಲಿ ಉತ್ಪಾದನೆಯಾಗುವ ಉಕ್ಕಿನ ಬೆಲೆ ಒಂದು ಟನ್ನಿಗೆ 450-ಡಾಲರ್ ಅಧಿಕೃತ ಬೆಲೆ ಇರುವಾಗ ಪ್ರತಿಟನ್ನಿಗೆ 17 ರಿಂದ 20 ಡಾಲರಿನಷ್ಟು ನಷ್ಟ ಅಲ್ಲಿಯ ಉತ್ಪಾದಕರಿಗಾಗುತ್ತಿದೆಂದು ತಿಳಿದು ಬರುತ್ತದೆ. ಆ ಕಾರಣದಿಂದಾಗಿ ಅಮೇರಿಕದಲ್ಲಿ ಬಹಳಷ್ಟು ಉಕ್ಕು ಕಾರ್ಖಾನೆಗಳು ಮುಚ್ಚಲ್ಪಟಿವೆ. ಒಟ್ಟಾರೆ ನೋಡಿದರೆ 1981 ರಿಂದ ಅವರಿಗೆ ಲಾಭವಿಲ್ಲದಾಗಿದೆ ಪ್ರತಿವರ್ಷ 3 ಬಿಲಿಯ ಡಾಲರಷ್ಟು ಅನುಭವಿಸುತ್ತಿದ್ದಾರೆ. 1, 50000 ದಷ್ಟು ಕಾರ್ಮಿಕರಿಗೆ ಕೆಲಸ ನಿರಾಕರಿಸಲಾಗಿದೆ, 20 ಮಿಲಿಯ ಟನ್ ಉತ್ಪಾದನೆ ಸ್ಥಗಿತ ಗೊಂಡಿದೆ.

ರಕ್ಷಣಾ ಉತ್ಪಾದನೆಯಲ್ಲಿ ತೊಡಗಿರುವ ಚಾರ್ಸ್ ಬ್ರಿಡ್ ಪೋರ್ಡರ ಹೇಳಿಕೆಯಂತೆ ಮುಂದಿನ 5 ವರ್ಷಗಳಲ್ಲಿ ಈಗಿರುವ 120 ಮಿಲಿಯ ಟನ್ ಉತ್ಪಾದನಾ ಶಕ್ತಿ ಶೇ. 20ರಿಂದ 25-ರಷ್ಟು ಕಳೆದು ಕೊಳ್ಳುತ್ತದೆ. ವಿದೇಶಗಳ ಅಗ್ಗದರದ ಉಕ್ಕಿನ ಆಮದು ಈ ಕೈಗಾರಿಕೆಗಳ ಮೇಲೆ ಒತ್ತಡ ತರುತ್ತಿದೆ ಹೋದ ವರ್ಷ ಅಮೇರಿಕದ ಆಂತರಿಕ ಮಾರ್ಕೇಟಿನಲ್ಲಿ ಖರ್ಚಾಗುತ್ತಿದ್ದ ಶೇ.. 26 ರಷ್ಟು ಉಕ್ಕನ್ನು ಅಂದರೆ 26 ಮಿಲಿಯಟನ್ ಆಮದು ಮಾಡಲಾಗಿದೆ. ನಿಶ್ಚಕ್ತಗೊಳ್ಳುತ್ತಿರುವ ದೇಶಿ ಉಕ್ಕಿನ ಕೈಗಾರಿಕೆಗಳನ್ನು ರಕ್ಷಿಸಲು ಶೇ. 18/5 ರಷ್ಟೆ ಆಮದಿಗೆ ಮಿತಿ ಹೇರಿದೆ. ಆಸ್ಟ್ರೇಲಿಯಾ, ಬ್ರೆಜಿಲ್, ಜಪಾನ್ ಮಾಸ್ಕೋ ಮೊದಲಾದ ದೇಶಗಳೊಡನೆ ಇದರ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ.

ಉಕ್ಕಿನ ಕೈಗಾರಿಗೆ ಭೀಕರ ಬಿಕ್ಕಟ್ಟನ್ನೆದುರಿಸುತ್ತಿದೆಂದು ಉದ್ಯಮಿಗಳು, ಅರ್ಥಶಾಸ್ತ್ರಜ್ಞರೂ ಒಪ್ಪಿಕೊಂಡಿದ್ದಾರೆ ಅದಕ್ಕೆ ಪರಿಹಾರ ಸಿಗಲಾರದಾಗಿದೆ, 1990 ರವರೆಗೆ ಪರಿಹಾರ ಒದಗಲಾರದೆಂಬ ನಿರ್ಣಯಕ್ಕೆ ಬಂದಿದ್ದಾರೆ.

(ಚೈನಾ ಡೈಲಿ ಕೃಪೆಯಿಂದ)

(2ನೇ ಪುಟದಿಂದ)

ಮಾರು ಕಟ್ಟೆಯಲ್ಲಿ ಅವುಗಳ ಬೆಲೆಗಳನ್ನು ಇಳಿಮುಖ ಗೊಳಿಸಲು ಬಳಸುತ್ತಿಲ್ಲ. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಮಾತ್ರ ಅಕ್ಕಿಯನ್ನು ಬಡ ಜನರಿಗೆ ಸಹಾಯಧನದ ಮೂಲಕ ಅಗ್ಗದ ದರದಲ್ಲಿ ಸ್ವಲ್ಪ ಮಟ್ಟಿಗೆ ವಿತರಣೆ ಮಾಡಲಾಗುತ್ತಿದೆ. ಇತರ ರಾಜ್ಯಗಳಲ್ಲಿ ಈ ಸೌಕರ್ಯವೂ ಇಲ್ಲ.

ಆಹಾರ ಧಾನ್ಯಗಳ ಸಂಗ್ರಹಣೆಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ಎನ್. ಆರ್. ಇ. [ಹಿಂದಿನ ಜನತಾ ಸರಕಾರದ "ಕೆಲಸಕ್ಕೆ – ಕಾಳು" ಕಾರ್ಯಕ್ರಮ] ಕೂಲಿ ರೂಪದಲ್ಲಿ ಕೊಡುವ ಆಹಾರ ಧಾನ್ಯಗಳ ಅಂಶವನ್ನು ಎರಡು – ಮೂರು – ನಾಲ್ಕು ಪಾಲು ಹೆಚ್ಚಿಸಲು ಬಳಸ ಬಹುದು. ಸದ್ಯ [1983-84 ರಲ್ಲಿ] ಈ ಕಾರ್ಯಕ್ರಮಕ್ಕೆ ವಿನಿಯೋಗವಾಗುತ್ತಿರುವ ಆಹಾರ ಧಾನ್ಯಗಳ ಮೊತ್ತ ಕೇವಲ 0.6 ಮಿ. ಟ ಇದನ್ನು ಮೂರು ಪಾಲು ಹೆಚ್ಚಿಸಿದರೂ 1.8 ಮಿ. ಟ. ಅಷ್ಟೇ ಆಗುವುದು. ಆಹಾರ ಧಾನ್ಯಗಳ ಸಂಗ್ರಹಣೆಯನ್ನು ಗ್ರಾಮೀಣ ಭೂ ರಹಿತರಿಗೆ ಉದ್ಯೋಗ ಖಾತರಿಯ ಕಾರ್ಯಕ್ರಮಕ್ಕೆ [ಆರ್.ಎಲ್.ಇ.ಜಿ.ಪಿ] ಉದಾರವಾಗಿ ಬಳಸಬಹುದು. ಇದರಿಂದ ಗ್ರಾಮೀಣ ಬಡಜನರ ಉದ್ಯೋಗಾವಕಾಶ, ಆದಾಯ, ಜೀವನ ಮಟ್ಟ ಉತ್ತಮಗೊಳ್ಳುವುದು. ಅವರ ಆಹಾರ ಧಾನ್ಯ ಬಳಕೆ ಹೆಚ್ಚುವುದು ಅವರು ಗ್ರಾಮೀಣ ಸಾಹುಕಾರರಿಂದ, ಭೂಮಾಲಕರಿಂದ ಸ್ವಲ್ಪ ಮಟ್ಟಿಗಾದರೂ ಮುಕ್ತಗೊಳ್ಳಬಹುದು. ಗ್ರಾಮೀಣ ಉದ್ಯೋಗಾವಕಾಶಗಳಿಂದ ಶಾಲೆ, ಆಸ್ಪತ್ರೆ, ರಸ್ತೆ, ಬಾವಿ, ಅರಣ್ಯ ಸಂಪತ್ತು ಅಭಿವೃದ್ಧಿಗೊಳಿಸಬಹುದು.

ಆಹಾರ ಧಾನ್ಯಗಳ ಉತ್ಪಾದನೆಯೊಂದಿಗೇ ಬೇಳೆ ಕಾಳು, ಎಣ್ಣೆ ಬೀಜ, ಇತ್ಯಾದಿಗಳ ಉತ್ಪಾದನೆಗೂ ಹೆಚ್ಚು ಆದ್ಯತೆ ನೀಡಬಹುದು. ಇವುಗಳ ಉತ್ಪಾದನೆಯು ಅಗತ್ಯತೆಗಿಂತ ಬಹಳ ಕಡಿಮೆಯಾಗಿದೆ. ಗೋಧಿ ಬೆಳೆಯಂತೆಯೇ ಅಕ್ಕಿ ನಗದಿ ಬೆಳೆಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು.

ಆದರೆ ಭೂಮಾಲಿಕ – ಬಂಡವಾಳಶಾಹಿ ಹಿತಾಸಕ್ತಿಗಳನ್ನೇ ಪ್ರತಿನಿಧಿಸುವ ಕಾಂಗ್ರೆಸ್ ಸರಕಾರ ಇಂತಹ ಯಾವುದೇ ಕಾರ್ಯಕ್ರಮಗಳನ್ನು ಕೈಕೊಳ್ಳಲಾರದು ಬದಲು, ಅಮೇರಿಕ ಯುರೋಪಿನಲ್ಲಿ ಹೊಸ ಮಾರುಕಟ್ಟೆಗಳಿಸಲು ದುಬಾರಿ ವೆಚ್ಚದಲ್ಲಿ "ಭಾರತ ಉತ್ಸವ" ನಡೆಸಲು ಉತ್ಸುಕತೆ ವಹಿಸುತ್ತಿದೆ. ದೇಶದ ಶಾಪದಂತಿರುವ ನಿರಕ್ಷರತೆ, ಅನಾರೋಗ್ಯ, ನಿರುದ್ಯೋಗ, ಬಡತನವನ್ನು ಸ್ವಾವಲಂಬನೆಯಮಾರ್ಗದಲ್ಲಿ ಹೋಗಲಾಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬದಲು, ಹಳೆಯ ವ್ಯವಸ್ಥೆಯ ತಳಪಾಯದ ಮೇಲೆ ಆಧುನಿಕ ಬಂಡವಾಳ ಶಾಹಿ ವ್ಯವಸ್ಥೆಯನ್ನು ಕಟ್ಟಲು ಹವಣಿಸುತ್ತಿದೆ. ಸಂಪನ್ಮೂಲಗಳ ಕೊರತೆಯಿಂದ ಕಾಂಗ್ರೆಸ್ ಸರಕಾರ ಆರ್ಥಿಕ ಯೋಜನೆಯನ್ನೇ ಕೈ ಬಿಟ್ಟು ಖಾಸಗೀ ರಂಗವನ್ನೇ ಅವಲಂಬಿಸುವುದರಲ್ಲಿದೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶದ ಮಾರು ಕಟ್ಟೆಯನ್ನು ತೆರೆಯಲಿದೆ. ಈ ಅಪಾಯಗಳನ್ನು ಶ್ರಮಿಕ ವರ್ಗದ ಸಂಘಟಿತ ಹೋರಾಟಗಳಿಂದಲೇ ಎದುರಿಸಬೇಕಾಗಿದೆ. ○

ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟನಾ ಸಭೆ

ಕಾಡುಗೋಡಿ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರಾದ ಎಸ್. ಎಸ್. ಗಂಗಾಧರ್‌ರವರು ಹೊಸಕೋಟೆ ತಾಲ್ಲೂಕಿನ ಪ್ರಾಂತ ರೈತ ಸಂಘದ ಚಟುವಟಿಕೆಗಳನ್ನು ಹತ್ತಿಕ್ಕಲು ಹೊರಟಿದ್ದು, ತನ್ಮೂಲಕವಾಗಿ ತಾಲೂಕಿನ ಶ್ರೀಮಂತರಿಂದ ಶಹಬಾಷ್‌ಗಿರಿಯನ್ನು ಪಡೆಯಲು ಹೊರಟಿದ್ದಾರೆ.

ಇದಕ್ಕೆ ನಿದರ್ಶನವಾಗಿ ದಿನಾಂಕ: 11-8-85 ರಂದು ದೂರು ಕೊಡಲು ಹೋದ ನಾಗನಾಯಕನ ಕೋಟೆಯ ಸಿದ್ದೇಗೌಡ, ನಾರಾಯಣಸ್ವಾಮಿ, ಮತ್ತು ಕರಿಯಣ್ಣ ಇವರುಗಳಿಗೆ ಅನಗತ್ಯವಾಗಿ ಚಿತ್ರಹಿಂಸೆ ನೀಡಿರುವ ಪ್ರಕರಣವನ್ನು ಗಮನಿಸಬಹುದಾಗಿದೆ. (ಈ ವರದಿ ಈಗಾಗಲೇ ಐಕ್ಯರಂಗದಲ್ಲಿ ಪ್ರಕಟವಾಗಿದೆ) ಹೊಸಕೋಟೆ ತಾಲ್ಲೂಕಿನ ಬೋಧನ ಹೊಸಹಳ್ಳಿ ಗ್ರಾಮದ ಬಡಗೇಣಿದಾರರಾದ ಮುನಿಶಾಮಪ್ಪ ಮತ್ತು ಈರಪ್ಪ ಇವರುಗಳು ಸರ್ವೆ ನಂ. 22 ರ 3-12 ಎಕರೆ ಜಮೀನನ್ನು 15 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿದ್ದು ಪ್ರಸಕ್ತ ಸಾಲಿನಲ್ಲಿಯೂ ರಾಗಿ ಬೆಳೆಯನ್ನು ಇಟ್ಟಿದ್ದು, ಪೈರು ಸುಮಾರು ಅರ್ಧ ಅಡಿಯವರೆಗೆ ಬೆಳೆದಿತ್ತು. ಈ ಬೆಳೆಯನ್ನು ದಿನಾಂಕ 8-9-85 ರಂದು ಸಬ್‌ಇನ್ಸ್‌ಪೆಕ್ಟರ್ ಗಂಗಾಧರ್‌ರವರು ಸುಮಾರು 30 ಜನ ಸಿಬ್ಬಂದಿಯೊಂದಿಗೆ ಹೋಗಿ ಅದೇ ಊರಿನ ಅವರ ಎದುರಾಳಿಗಳಿಗೆ ಕುಮ್ಮಕ್ಕು ಕೊಟ್ಟು ಬೆಳೆಯನ್ನು ಉಳುಮೆ ಮಾಡಿಸಿ ನಾಶ ಮಾಡಿದ್ದಾರೆ.

ಈ ಬಗ್ಗೆ ಸಿ.ಐ.ಟಿ.ಯು. ಕೋಆರ್ಡಿನೇಷನ್ ಕಮಿಟಿಯ ವತಿ ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟನಾ ಮೆರವಣಿಗೆ ಮತ್ತು ಸಭೆಯನ್ನು ದಿನಾಂಕ 20-9-85 ರಂದು ಕಾಡುಗೋಡಿಯಲ್ಲಿ ಏರ್ಪಡಿಸಿದ್ದರು. ಸುಮಾರು 600 ಜನರಿದ್ದ ಮೆರವಣಿಗೆಯಲ್ಲಿ ಪೋಲೀಸರ ದೌರ್ಜನ್ಯದ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು.

ಪ್ರತಿಭಟನಾ ಸಭೆಯಲ್ಲಿ ಸ್ವಾಗತ ಭಾಷಣ ಮಾಡಿದ ಎಚ್. ಸಿ ಪ್ರಭುದೇವಯ್ಯನವರು ಸಬ್‌ಇನ್ಸ್‌ಪೆಕ್ಟರ್‌ರವರ ಕಾನೂನು ಬಾಹಿರ ಕ್ರಮಗಳನ್ನು ಖಂಡಿಸಿ, ಅವರನ್ನು ಕೂಡಲೇ ಅಮಾನತ್ತುಗೊಳಿಸಿ ವಿಚಾರಣೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಅಧ್ಯಕ್ಷತೆ ವಹಿಸಿದ್ದ ವಿನ್ಸೆಂಟ್‌ರವರೂ ಸಹ ಪೋಲೀಸರ ಅಮಾನುಷ ವರ್ತನೆಯನ್ನು ಖಂಡಿಸಿದರು. ಪಿ. ಜಗನ್ನಾಥರವರು ಮಾತನಾಡಿ ರೈತ ಸಂಘದ ಕಾರ್ಯಕರ್ತರ ಮೇಲೆ ಪೋಲೀಸರು ನಡೆಸುವ ದೌರ್ಜನ್ಯ ತುರ್ತುಪರಿಸ್ಥಿತಿಯ ಅತಿರೇಕಗಳನ್ನು ನಾಚಿಸುವ ಮಟ್ಟಕ್ಕೆ ಹೋಗಿದೆ ಎಂದರು. ರೈತ ಸಂಘದ ಕಾರ್ಯಕರ್ತರನ್ನು ಗಡೀಪಾರು ಮಾಡುವುದಾಗಿ ಬೆದರಿಕೆ ಹಾಕುತ್ತಿರುವ ಬಗ್ಗೆ ತರಾಟೆಗೆ ತೆಗೆದುಕೊಂಡ ಎಸ್. ಸೂರ್ಯನಾರಾಯಣರಾವ್‌ರವರು, ಈ ಬಗ್ಗೆ ಸಿ.ಐ.ಟಿ.ಯು. ವತಿಯಿಂದ ರಾಜ್ಯಾದ್ಯಂತ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುವುದು ಅನಿವಾರ್ಯವಾಗಿದೆ ಎಂದು ಎಚ್ಚರಿಸಿದರಲ್ಲದೆ ರೈತ ಸಂಘದ ಕಾರ್ಯಕರ್ತರ ಮೇಲೆ ವಿನಾಕಾರಣ ದೌರ್ಜನ್ಯವೆಸಗಿ ಚಿತ್ರಹಿಂಸೆ ನೀಡಿರುವ ಮತ್ತು ಬಡಗೇಣಿದಾರರ ಬೆಳೆಯನ್ನು ಹಾಳು ಮಾಡಿಸಿರುವ ಪೋಲೀಸರನ್ನು ಅಮಾನತ್ತುಗೊಳಿಸಿ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವವರೆಗೂ ಹೋರಾಟವನ್ನು ನಿಲ್ಲಿಸುವುದಿಲ್ಲವೆಂದು ಸರ್ಕಾರವನ್ನು ಎಚ್ಚರಿಸಿದರು. ಕೊನೆಯಲ್ಲಿ ಆರ್. ಆರ್. ಮನೋಹರ್‌ರವರು ವಂದಿಸಿದರು.

ಇಲ್ಲಿದೆ ನೋಡಿ ಪಾದಯಾತ್ರೆ ವೈಖರಿ!

ರುದ್ರಪ್ಪನವರ ರೈತ ಸಂಘ ಬೆಂಗಳೂರಿಗೆ ಪಾದ ಯಾತ್ರೆ ಪ್ರಾರಂಭಿಸಿದೆ. ಹೆಗ್ಗಡೆ ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ. ಆದರೆ ಈ ಹಿಂದೆ ಗುಂಡೂರಾವ್ ಸರಕಾರ ಅಧಿಕಾರದಲ್ಲಿದ್ದಾಗ,' ರೈತರ ಮೇಲೆ ಅವರು ನಡೆಸಿದ ದೌರ್ಜನ್ಯದ ವಿರುದ್ಧ ಮಲಪ್ರಭಾ ಸಮನ್ವಯ ಸಮಿತಿಯ ನೇತೃತ್ವದಲ್ಲಿ ನರಗುಂದದಿಂದ ಹೊರಟ ರೈತರ ಪಾದಯಾತ್ರೆ ಅದಕ್ಕೆ ಬೆಂಬಲಾರ್ಥವಾಗಿ ಬಿಜಾಪುರ, ಮೈಸೂರು, ಕೋಲಾರ, ಮೊದಲಾದೆಡೆಗಳಿಂದ ಹೊರಟ ರೈತರ ಪಾದಯಾತ್ರಿಗೂ ಈಗ ಹೊರಟಿರುವ ರೈತರ ಪಾದಯಾತ್ರಿಗೂ ವ್ಯತ್ಯಾಸವಿದೆ.

ರುದ್ರಪ್ಪನವರ ರೈತರ ಸಂಘದ ಪಾದಯಾತ್ರೆಯ ಹಿಂದೆ ಅಪಾರ ಆಹಾರ ವಸ್ತುಗಳು, ಅಡಿಗೆ ಪಾತ್ರೆಗಳು, ಬಟ್ಟೆ ಬರೆ ಹಾಸಿಗೆಗಳನ್ನು ಹೊತ್ತ ಟ್ರಾಕ್ಟರ್, ಜೀಪ್, ಲಾರಿಗಳ ಭಾರಿ ಮೆರವಣಿಗೆಯೂ ಹೊರಟಿರುವುದನ್ನು ನೋಡುವಾಗ ಅದು ಎಂಥ ರೈತರ ಪಾದಯಾತ್ರೆ ಎಂಬುದನ್ನು ಜನರೇ ಅರ್ಥೈಸಿಕೊಳ್ಳಬೇಕು.

ನರಗುಂದ ಮತ್ತಿನ್ನಿತರ ಕಡೆಗಳಿಂದ 1982ರಲ್ಲಿ ಸಂಘಟಿಸಲ್ಪಟ್ಟ ರೈತರ ಪಾದಯಾತ್ರೆ ಜೊತೆಯಲ್ಲಿ ಟ್ರಾಕ್ಟರ್, ಜೀಪ್, ಲಾರಿಗಳ ಮೆರವಣಿಗೆ ಇರಲಿಲ್ಲ. ಸಾವಿರಾರು ಪಾದಯಾತ್ರಿಗಳಿಗೆ ದಾರಿಯುದ್ದಕ್ಕೂ ಆಯಾ ಗ್ರಾಮಸ್ಥರೇ ಊಟೋಪಚಾರ ಮೆರವಣಿಗೆ ಸಭೆಯನ್ನು ರಾತ್ರಿ ಹೊತ್ತು ಮಲಗುವ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಬೆಂಗಳೂರು ನಗರ ಪ್ರವೇಶಿಸಿದಾಗ ಕಾರ್ಮಿಕ ಸಮುದಾಯ 50 ಕಿಲೋಮೀಟರ್ ದೂರದಲ್ಲೇ ಪಾದಯಾತ್ರಿಗಳಿಗೆ ಊಟೋಪಚಾರದ ವ್ಯವಸ್ಥೆ ಮಾಡಿ ಸಂಭ್ರಮದ ಸ್ವಾಗತ ನೀಡಿದ್ದನ್ನು ನೆನಸಬಹುದಾಗಿದೆ.

ತಮ್ಮ ಸ್ವಾರ್ಥಸಾಧನೆಗಾಗಿ ಜಮೀನ್ದಾರರ, ದೊಡ್ಡ ಭೂಮಾಲಿಕರ ರೈತ ಮೆರವಣಿಗೆಗೂ, ಭೂಮಿಯಲ್ಲಿ ದುಡಿಯುವ ರೈತ ಮೆರವಣಿಗೆಗೂ, ಇರುವ ವ್ಯತ್ಯಾಸ ಇಲ್ಲಿ ಕಾಣಬಹುದಾಗಿದೆ.

ಪದವು ಪ್ರದೇಶ ಬೀಡಿ ಕಾರ್ಮಿಕರ ಸಭೆ

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವತಿಯಿಂದ ಪೈಲ್ವಾನ್ ಬೀಡಿ ಕಾರ್ಮಿಕರಿಗೆ ಮಾಲಕರು ಮಾಡಿದ ವಂಚನೆಯ ವಿರುದ್ಧ ತಾ। 17-9-85 ರಂದು ಕುಲಶೇಖರ ಬೀಡಿ ಯೂನಿಯನಿನ ಆಫೀಸಿನಲ್ಲಿ ಕುಮಾರಿ ಚಿತ್ರಾವತಿಯ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪ್ರಾರಂಭದಲ್ಲಿ ಸಂಘದ ಜೊತೆ ಕಾರ್ಯದರ್ಶಿ ಶ್ರೀಮತಿ ಯಮುನಾ ವಿ. ಸಾಲಿಯಾನ್‌ರವರು ಸಭೆಯನ್ನು ಸ್ವಾಗತಿಸಿ ಪೈಲ್ವಾನ್ ಬೀಡಿ ಮಾಲಕರು ಮಜೂರರಿಗೆ ಮಾಡಿದ ದ್ರೋಹವನ್ನು ಸಭೆಯಲ್ಲಿ ವಿವರಿಸಿದರು. ಸಂಘದ ಕಾರ್ಯದರ್ಶಿ ಕಾ। ಕೆ. ಬಾಬು ದೇವಾಡಿಗರು ಪೈಲ್ವಾನ್ ಬೀಡಿ ಮಾಲಕರು ಬೀಡಿ ಕಾರ್ಮಿಕರಿಗೆ ಸಾಧಾರಣ 8 ಲಕ್ಷ ರೂ. ವಂಚನೆ ಮಾಡಿ ರಾತ್ರೋ ರಾತ್ರಿ ಡಿಪೋ ಮುಚ್ಚಿ ಪರಾರಿಯಾದ ನೀತಿಯನ್ನು ಸಭೆಯಲ್ಲಿ ಖಂಡಿಸಿದರು. ಅದೇ ಮಾಲಕರು ಈಗ ಪುತ್ತೂರು ಉಳ್ಳಾಲ, ಪಾಣೆಮಂಗಳೂರು ಮೂಡಬಿದ್ರಿ ಈ ಕಡೆಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಬೀಡಿ ತಯಾರಿಸುತ್ತಾರೆ. ಈ ಬಗ್ಗೆ ಕಾರ್ಮಿಕ ಮಂತ್ರಿಯವರು ಕೂಡಲೇ ಮಾಲಕರ ಮೇಲೆ ತಕ್ಕ ಕ್ರಮ ಕೈಕೊಂಡು ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಸಭೆ ಒತ್ತಾಯಿಸಿತು.

ಸರದಿ ಉಪವಾಸ ಸತ್ಯಾಗ್ರಹ

ಮಾನ್ವಿ ತಾಲೂಕಿನ ಸಾವಿರಾರು ರೈತ ಕೃಷಿ ಕೂಲಿಕಾರರಿಗೆ ವಸತಿ ಸೌಕರ್ಯವನ್ನು ಒದಗಿಸಲು, ಬರಗಾಲ ಕಾಮಗಾರಿಕೆ ಕೆಲಸ ಪ್ರಾರಂಭಿಸಲು, ಸೊಪ್ಪು ಒದಗಿಸಲು, ಡಿ.ಆರ್.ಡಿ.ಎಸ್. ಸಾಲ ಒದಗಿಸಲು, ರೈತರ ಸಾಲ ವಸೂಲಿಗಾಗಿ ಭೂಮಿ ಮುಟ್ಟುಗೋಲು ಹಾಕುವ ಕಾಯ್ದೆಯನ್ನು ರದ್ದುಗೊಳಿಸಬೇಕು, ಟೀ ಲ್ಯಾಂಡ್ ರೈತರಿಗೆ ಗೇಜ್ ಪ್ರಕಾರ ನಿರೋದಗಿಸುವಂತಾಗಲು ಜಿಲ್ಲಾ ಬರಗಾಲವೆಂದು ಘೋಷಿಸಬೇಕು, ರೈತ ಬಾಂಧವರಿಗೆ ಭೂ ಸಾಲವನ್ನು ವಿತರಿಸಲು ಒತ್ತಾಯಿಸಲು ತೀವ್ರ ಹೋರಾಟ ಕಾರ್ಯಕ್ರಮದ ಅಂಗವಾಗಿ ದಿನಾಂಕ: 30-9-85 ಸೋಮವಾರದಿಂದ ತಾಲೂಕು ಆಫೀಸಿನ ಮುಂದಗಡೆ ರೈತರ ಸರದಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಂಡಿದೆ.

"ಸಮುದಾಯ"ದ ವಾರ್ಷಿಕ ಸಭೆ

ತಾ।13.10.85 ರಂದು ಪುತ್ತೂರು ಸಮುದಾಯದ ವಾರ್ಷಿಕ ಸಭೆ ನಡೆಯಿತು. ಸಭಾಧ್ಯಕ್ಷತೆಯನ್ನು ಪುತ್ತೂರು ಸಮುದಾಯದ ಕಾರ್ಯದರ್ಶಿ, ಎಸ್ ಎಸ್ ಭಟ್ ಅವರು ವಹಿಸಿದ್ದು ಪುತ್ತೂರು ಸಮುದಾಯವು ಹಾಕಿಕೊಂಡ ಕಾರ್ಯಕ್ರಮಗಳ ವರದಿ ಮತ್ತು ಸಮುದಾಯದ ಮೂಲ ಉದ್ದೇಶಗಳನ್ನು ವಿವರಿಸಿದರು. ಪುತ್ತೂರು ತಾಲೂಕಿನ ರೈತ ಕಾರ್ಮಿಕ ಮುಖಂಡರೂ, ಪುತ್ತೂರು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕರೂ ಆದ ಬಿ. ರಾಮಕೃಷ್ಣನವರು ಮುಖ್ಯ ಅತಿಥಿಗಳಾಗಿ ಮಾತಾನಾಡುತ್ತಾ ಕಲಾವಿದರು, ಸಾಹಿತಿಗಳು ಇಂದು ಸಾಮಾಜಿಕ ಕಳಕಳಿ ಹೊಂದಿದ್ದು, ತಮ್ಮ ಕಾರ್ಯಕ್ರಮಗಳನ್ನು ಜನರ ಬದುಕಿನ ವಾಸ್ತವತೆಗೆ ಸ್ಪಂದಿಸ ಹೊರಟಿರುವುದು ಸಂತೋಷದಾಯಕ ವಿಷಯವೆಂದು ಹೇಳಿದರು. ಸಭೆಯನ್ನುದ್ದೇಶಿಸಿ ಪುರುಷೋತ್ತಮ, ಶ್ರೀಮತಿ ಸೀತಾ, ಅಬ್ಬಾಸ್ ಮತ್ತು ರಾಧಾಕೃಷ್ಣನವರು ಮಾತನಾಡಿದರು.

ಡಿ. ವೈ. ಎಫ್. ಐ. ಘಟಕಗಳ ರಚನೆ

6-10-1985 ರಂದು ವಿರಾಜಪೇಟೆ ತಾಲೂಕಿನ ಅರವತ್ತೋಕ್ಲಿನಲ್ಲಿ ನಡೆದ ಡಿ.ವೈ.ಎಫ್.ಐ. ಸರ್ವಸದಸ್ಯರ ಸಭೆಯಲ್ಲಿ ಜಿಲ್ಲಾ ಸಂಚಾಲಕ ಕಾ॥ ಸ್ಟ್ಯಾನ್ಲಿವಾಸ್ ಮತ್ತು ಅಧ್ಯಕ್ಷರಾದ ಕಾ॥ ಐ. ಆರ್. ಪ್ರಮೋದ್, ತಾಲೂಕು ಅಧ್ಯಕ್ಷ ಫಿಲಿಫ್‌ರವರು ಸಂಘಟನೆಯ ಧ್ಯೇಯೋದ್ದೇಶಗನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕೆ.ಎಫ್. ವರ್ಗೀಸ್ ರವರು ವಹಿಸಿದರು. ಒಂಬತ್ತು ಸದಸ್ಯರ ಸಮಿತಿಯೊಂದನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಶ್ರೀಮತಿ ಕೆ.ಎಂ. ತುಳಸಿ, ಉಪಾಧ್ಯಕ್ಷರಾಗಿ ಎಂ ಬಿ ಥಾಮಸ್, ಕಾರ್ಯದರ್ಶಿಯಾಗಿ ಓ.ಎಸ್. ಶಿವರಾಂ, ಸಹ ಕಾರ್ಯದರ್ಶಿಯಾಗಿ ಕೆ.ಎಸ್. ವರ್ಗೀಸ್. ಖಜಾಂಚಿಯಾಗಿ ಕೆ. ವಿ. ಜೋಸ್ ಸದಸ್ಯರಾಗಿ ಶ್ರೀಮತಿ ಲಕ್ಷ್ಮಿ, ಪುಷ್ಪ, ಮತ್ತು ಜೀನ್‌ರವರುಗಳು ಆಯ್ಕೆಯಾಗಿರುತ್ತಾರೆ.

6-10-1985ರ ಸಂಜೆ ಗೋಣಿಕೊಪ್ಪಲಿನ ಚೆನ್ನಂಗೊಲ್ಲಿಯಲ್ಲಿ ಕಾ. ಎಂ ಎಸ್. ಶ್ರೀಧರನ್‌ರವರ ಅಧ್ಯಕ್ಷತೆಯಲ್ಲಿ ಸರ್ವಸದಸ್ಯರ ಸಭೆ ನಡೆಯಿತು. ಐ.ಆರ್. ಪ್ರಮೋದ್ ಮತ್ತು ಸ್ಟ್ಯಾನ್ಲಿವಾಸ್ ರವರುಗಳು ಸಂಘಟನೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ನಂತರ ಸಮಿತಿಯನ್ನು ರಚಿಸಲಾಯಿತು ಅಧ್ಯಕ್ಷ ಎಂ. ಎಸ್. ಮಜೀಬ್, ಉಪಾಧ್ಯಕ್ಷ ಕೆ. ಪ್ರಕಾಶ್, ಕಾರ್ಯದರ್ಶಿ ಸಿ. ಎ. ಸುಕುಮಾರನ್, ಸಹಕಾರ್ಯದರ್ಶಿ ಟಿ.ಆರ್. ಜನಾರ್ಧನ್, ಖಜಾಂಚಿ ಕೆ.ಪಿ. ಸುಕುಮಾರನ್, ಸದಸ್ಯರಾಗಿ ಎಂ. ಎಸ್. ನಿಜಾಮ್; ಎಂ. ಎಸ್. ಶ್ರೀಧರ್, ಕೆ.ಎನ್. ಅಶೋಕ್. ಎ.ಸಿ. ದಿವಾಕರನ್ ಅವರುಗಳನ್ನು ಆಯ್ಕೆಮಾಡಲಾಯಿತು.

ಐತಿಹಾಸಿಕ ಚಿತ್ರ ಪ್ರದರ್ಶನ

ಸೆಪ್ಟಂಬರ್ 1 ರಂದು ವಿಶ್ವಶಾಂತಿ ದಿನಾಚರಣೆಯ ಅಂಗವಾಗಿ ದಾಂಡೇಲಿಯ ಸಿ.ಐ.ಟಿ.ಯು. ವಿನ ನಗರ ಸಮಿತಿ ಆಶ್ರಯದಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯ ಚಿದಾನಂದ ತೆಗ್ಗಿಹಳ್ಳಿಯವರು ಚಿತ್ರಿಸಿರುವ "ಮಹಾಯುದ್ಧಗಳು ಮತ್ತು ವಿಶ್ವಶಾಂತಿ" ಎಂಬ ಐತಿಹಾಸಿ ಚಿತ್ರಗಳ 12 ನೇ ಪ್ರದರ್ಶನವನ್ನು ಕನ್ಯಾ ವಿದ್ಯಾಲಯದಲ್ಲಿ ಮುಂಜಾನೆ 10 ರಿಂದ ರಾತ್ರಿ 8 ರವರೆಗೆ ಏರ್ಪಡಿಸಿದ್ದರು.

ಈ ಪ್ರದರ್ಶನದಲ್ಲಿ ಸುಮಾರು ಸಾವಿರದಷ್ಟು ವಿದ್ಯಾರ್ಥಿಗಳೂ ಯುವಜನರು, ಕಾರ್ಮಿಕರು ಸಾರ್ವಜನಿಕರು ಭಾಗವಹಿಸಿ ವೀಕ್ಷಿಸಿದರು.

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560053 Editorial and managerial office, L-56, K. V. Temple Street, Sultanpet, B-53 Phone : 75331
Editor P. Ramachandra Rao
Managing Editor: N. K. Upadhyaya